ಸಂಪುಟ: 04 ಸಂಚಿಕೆ: 311 ಪುಟಗಳು: 08 ಗುರುವಾರ 23 ಜನವರಿ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

ಮುಂಜಾನೆ ಮಾತು
ನೀವು ನಿಮ್ಮ ಭವಿಷ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ, ನಿಮ್ಮ ಅಭ್ಯಾಸಗಳನ್ನು ಬದಲಾಯಿಸುವ ಅವಕಾಶ ನಿಮಗಿದೆ ಮತ್ತು ನಿಮ್ಮ ಅಭ್ಯಾಸಗಳು ಖಂಡಿತಾ ನಿಮ್ಮ ಭವಿಷ್ಯವನ್ನು ಬದಲಾಯಿಸುತ್ತವೆ

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ದಲಿತರನ್ನು ಸಿಎಂ ಮಾಡ್ತೀನಿ ಅಂತಿದೀರಲ್ಲ, ಈಗ ಮಾಡಿ

• ಉದಯವಾಹಿನಿ, ಬೆಂಗಳೂರು

ನಾವು ಬೆಂಕಿ ಇದ್ದಂತೆ, ಮನಸು ಮಾಡಿದ್ರೆ ಸುಟ್ಟು ಹೋಗ್ತೀರಿ ಅಂತಾ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ಇದು ಯಾವ ಗಾಂಧಿಯ ತತ್ವ, ಮಹಾತ್ಮಾ ಗಾಂಧಿ ಅವರು ಇದನ್ನು ಹೇಳಿಕೊಟ್ಟಿದ್ರಾ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದ್ದಾರೆ. ಅದಲ್ಲದೇ ಬಿಜೆಪಿಯಲ್ಲಿ ಬೆಂಕಿ ಇಲ್ಲ ಎನ್ನುವಂತಿಲ್ಲ, ಬೆಂಕಿಯೂ ಇದೆ, ಬಿರುಗಾಳಿಯೂ ಇದೆ. ಅದನ್ನು ಆರಿಸುವ ಜಲಶಕ್ತಿಯೂ ಇದೆ, ಜನಶಕ್ತಿಯೂ ಇದೆ. ಯಾವ ವಿಧದಲ್ಲೂ ನೀವು ನಮಗೆ ಸರಿಸಮಾನರಲ್ಲ ಎಂದು ವಾಗ್ದಾಳಿ ನಡೆಸಿದರು. ಬೆಳಗಾವಿಯಲ್ಲಿ ನಡೆದ ಕಾಂಗ್ರೇಸ್‌ನ ಜೈ ಬಾಪು, ಜೈ ಭೀಮ್ ಹಾಗೂ ಜೈ ಸಂವಿಧಾನ ಸಮಾವೇಶಕ್ಕೆ ವಿರುದ್ಧವಾಗಿತ್ತು. ಈಗಿನ ಕಾಂಗ್ರೇಸ್ ಕೂಡ ಅದಕ್ಕೆ ವಿರುದ್ಧವಾಗಿದೆ. ಈ ಸಮಾವೇಶ ಕಾಂಗ್ರೇಸ್ ಡಬಲ್ ಸ್ಟ್ಯಾಂಡರ್ಡ್ ಅನ್ನು ತೋರಿಸುತ್ತಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅಟ್ಟಹಾಸ, ಅಹಂಕಾರ, ಆತ್ಮ ವಂಚನೆಯ ಮಾತುಗಳನ್ನಾಡಿದ್ದಾರೆ.

ಬೇಸಿಗೆಯಲ್ಲಿ ಯಾವುದೇ 'ಲೋಡ್ ಶೇಡ್ಡಿಂಗ್' ಇರಲ್ಲ

• ಉದಯವಾಹಿನಿ, ಬಾಗಲಕೋಟೆ

ಪ್ರತಿ ವರ್ಷ ಬೇಸಿಗೆ ಆರಂಭವಾದರೆ ಸಾಕು, ಲೋಡ್ ವೆಡ್ಡಿಂಗ್ ನಿಂದ ಜನರು ಹೈರಾಣಾಗುತ್ತಾರೆ. ಒಂದು ಕಡೆ ವಿಪರೀತ ಸುಡುವ ಬಿಸಿಲು ಆದರೆ ಇನ್ನೊಂದು ಕಡೆ ಲೋಡ್ ಶೆಡ್ಡಿಂಗ್ ನಿಂದ ಜನರು ವಿದ್ಯುತ್ ಇಲ್ಲದೆ ಸೆಕೆಯಿಂದ ಬೇಸತ್ತು ಹೋಗುತ್ತಾರೆ. ಆದರೆ ಈ ಬಾರಿ ರಾಜ್ಯದ ಜನತೆಗೆ ಸಿಹಿ ಸುದ್ದಿ ಒಂದು ಇದ್ದು, ಈ ಬಾರಿ ಬೇಸಿಗೆಯಲ್ಲಿ ಯಾವುದೇ ರೀತಿಯ ಲೋಡ್ ಶೆಡ್ಡಿಂಗ್ ಮಾಡಲ್ಲ ಎಂದು ಇಂಧನ ಸಚಿವ ಕೆಜೆ ಜಾರ್ಜ್ ತಿಳಿಸಿದ್ದಾರೆ. ಬಾಗಲಕೋಟೆಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಈ ಬಾರಿ ಬೇಸಿಗೆ ಸಂದರ್ಭದಲ್ಲಿ ಲೋಡ್ ಶೆಡ್ಡಿಂಗ್ ಇರುವುದಿಲ್ಲ. ರಾಜ್ಯದಲ್ಲಿ ಬರಗಾಲ ಇದ್ದಾಗಲೇ ಲೋಡ್ ಶೆಡ್ಡಿಂಗ್ ಮಾಡಿಲ್ಲ. ಹೀಗಾಗಿ ಈ ವರ್ಷ ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಇರುವುದಿಲ್ಲ ಎಂದು ತಿಳಿಸಿದರು. ಒಂದು ವೇಳೆ ವಿದ್ಯುತ್ ಕೊರತೆ ಉಂಟಾದರೆ ಬೇರೆ ಕಡೆಯಿಂದ ವಿದ್ಯುತ್ ಖರೀದಿಸುತ್ತೇವೆ. ಈ ವರ್ಷವೂ ಬೇಡಿಗೆ ಜಾಸ್ತಿಯಾಗಿದೆ. ಈಗ 16 ರಿಂದ 17 ಸಾವಿರ ಮೆಗಾ ವೇಟ್ ಬೇಡಿಕೆ ಬರ್ತಾ ಇದೆ. ಕೊರತೆ ಉಂಟಾದರೆ ನಾವು ಬೇರೆ ಕಡೆಯಿಂದ ಖರೀದಿ ಮಾಡುತ್ತೇವೆ ಎಂದು ಬಾಗಲಕೋಟೆಯಲ್ಲಿ ಇಂಧನ ಖಾತೆಯ ಸಚಿವ ಕೆಜೆ ಜಾರ್ಜ್ ಹೇಳಿಕೆ ನೀಡಿದರು.

ಗುಂಡೂರಾವ್ ಅವರೇ ಈಜುಕೊಳ ಬಿಟ್ಟು ಹೊರಬನ್ನಿ

• ಉದಯವಾಹಿನಿ, ಬೆಂಗಳೂರು

ಸಚಿವ ದಿನೇಶ್ ಗುಂಡೂರಾವ್ ಅವರೇ ಈಜುಕೊಳ ಬಿಟ್ಟು ಹೊರಬಂದು ರಾಜ್ಯದ ಜನರಿಗೆ ಆರೋಗ್ಯದ ಗ್ಯಾರಂಟಿ ಕೊಡಿ ಎಂದು ಜೆಡಿಎಸ್ ಆಗ್ರಹಿಸಿದೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜೆಡಿಎಸ್, ಕಳಪೆ ಗುಣಮಟ್ಟದ ಔಷಧಿಗಳಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರು ಮತ್ತು ನವಜಾತ ಶಿಶುಗಳ ಸರಣಿ ಸಾವು ಆಗುತ್ತಿದ್ದರೂ, ಭ್ರಷ್ಟ ಕಾಂಗ್ರೇಸ್ ಸರ್ಕಾರ ಬುದ್ಧಿ ಕಲಿತಿಲ್ಲ ಎಂದು ಆರೋಪಿಸಿದೆ. ರಾಜ್ಯದಲ್ಲಿ 40ಕ್ಕೂ ಅಧಿಕ ನಕಲಿ ಔಷಧಗಳು ಪತ್ತೆಯಾಗಿದ್ದು ಪ್ರತಿಷ್ಠಿತ ಕಂಪನಿಗಳ ಹೆಸರಿನಲ್ಲಿ ನಕಲಿ ಔಷಧಗಳು ಪೂರೈಕೆ ಜಾಲ ವ್ಯಾಪಕವಾಗಿವೆ ಎನ್ನುವ ವರದಿ ಆತಂಕ ಹುಟ್ಟಿಸುತ್ತಿದೆ ಎಂದು ಹೇಳಿದೆ. ನಕಲಿ ಔಷಧಿಗಳಿಗೆ ಕಡಿವಾಣ ಹಾಕಬೇಕಾದ ಕಾಂಗ್ರೇಸ್ ಸರ್ಕಾರ ಮತ್ತು ಅಧಿಕಾರಿಗಳು ಕಮಿಷನ್ ಹಣಕ್ಕಾಗಿ ಕಂಪನಿಗಳ ಜತೆ ಶಾಮೀಲಾಗಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ ಎಂದು ಆರೋಪಿಸಿರುವ ಜೆಡಿಎಸ್, ಶೇ.60ರಷ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರಕ್ಕೆ ಬಡವರ ಪ್ರಾಣದ ಬಗ್ಗೆ ಚಿಂತೆಯಿಲ್ಲ ಎಂದು ಟೀಕಿಸಿದೆ.

ರಾಜ್ಯದಲ್ಲಿ ಡಿಕೆಶಿ ಸಿಎಂ ಆಗುವುದನ್ನು ತಪ್ಪಿಸಲಾಗಲ್ಲ

• ಉದಯವಾಹಿನಿ, ಬೆಂಗಳೂರು

ಬಿಜೆಪಿಯ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹೇಳುವ ಮೂಲಕ . ಕುತೂಹಲ ಕೆರಳಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರ ಸದಾಶಿವನಗರದ ನಿವಾಸಕ್ಕೆ ಭೇಟಿ ನೀಡಿದ ಅವರು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಸಿದ್ದರಾಮಯ್ಯನವರೇ 5 ವರ್ಷ ಮುಖ್ಯಮಂತ್ರಿ ಎಂದು ಹೇಳಲಾಗುತ್ತಿದೆ. ಇದೆಲ್ಲಾ ಬಾಲಿಶತನ, ನಾನ್‌ಸನ್ (ಮೂರ್ಖತನ) ಎಂದು ಕಿಡಿಕಾರಿದ್ದಾರೆ. ರಾಜ್ಯದಲ್ಲಿ ಕಾಂಗ್ರೇಸ್ 136 ಸ್ಥಾನ ಗೆಲ್ಲಲು ಡಿ.ಕೆ.ಶಿವಕುಮಾರ್ ಅವರ ಕೊಡುಗೆ ಬಹಳಷ್ಟಿದೆ. ಅವರದು ಸಾಕಷ್ಟು ಖರ್ಚಾಗಿದೆ. ಚುನಾವಣಾ ಸಂದರ್ಭದಲ್ಲಿ ಮುಖ್ಯಮಂತ್ರಿ ಹುದ್ದೆಯ ಬಗ್ಗೆ, ಮಾತುಕತೆಯಾಗಿತ್ತು. ಹೀಗಾಗಿ ಮುಂದೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ ಎಂದರು.

■ ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಬದಲಾವಣೆ ಸುತ್ತ ನಡೆಯುತ್ತಿರುವ ಚರ್ಚೆಗಳು ಪಕ್ಷಕ್ಕೆ ತೀವ್ರ ಮುಜುಗರ ■ ಶಾಸಕರ ಅಭಿಪ್ರಾಯ ಸಂಗ್ರಹ ಸಭೆಯಲ್ಲೂ ವಿಜಯೇಂದ್ರ ಪರ ಮತ್ತು ವಿರೋಧ ಅಭಿಪ್ರಾಗಳು ವ್ಯಕ್ತ ■ ಒಂದು ಬಣ ವಿಜಯೇಂದ್ರ ಅವರನ್ನೇ ರಾಜ್ಯಾಧ್ಯಕ್ಷರನ್ನಾಗಿ ಮುಂದುವರಿಸಬೇಕು ಎಂಬ ಪಟ್ಟು , ಮತ್ತೊಂದು ಬಣ ವಿಜಯೇಂದ್ರ ಬದಲಾವಣೆಗೆ ಪಟ್ಟು

ಬಣ ಬಡಿದಾಟ ಕುರ್ಚಿ ಕಾದಾಟ

ಕೈ ಮೀರಿದ ಯತ್ನಾಳ್, ವಿಜಯೇಂದ್ರ ಸಮರ



• ಉದಯವಾಹಿನಿ, ಬೆಂಗಳೂರು

ಬಿಜೆಪಿ ಮನೆಯಲ್ಲಿ ಬಂಡಾಯದ ಬೆಂಕಿ ಹೊತ್ತಿ ಉರಿಯುತ್ತಿದೆ. ನಾಯಕರ ನಡುವಿನ ವಾಕ್ಸಮರ ಎಲ್ಲೆ ಮೀರಿ ಹೋಗಿದೆ. ಯತ್ನಾಳ್ ಹಾಗೂ ವಿಜಯೇಂದ್ರ ನಡುವಿನ ಸಮರ ಬೀದಿಗೆ ಬಂದು ನಿಂತಿದೆ. ಇಷ್ಟು ದಿನ ವಿಜಯೇಂದ್ರ ವಿರುದ್ಧ ತಮ್ಮ ಹೋರಾಟ ಎನ್ನುತ್ತಿದ್ದ, ಯತ್ನಾಳ್ ಅಂಡ್ ಟೀಂ ಈಗ ವರಸೆ ಬದಲಿಸಿದೆ. ವಿಜಯೇಂದ್ರ ಅವರನ್ನ ರಾಜ್ಯಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವುದೇ ನಮ್ಮ ಗುರಿ ಎಂದು ಸಿಡಿದು ನಿಂತಿದೆ. ಇದು ಬಿಜೆಪಿಯಲ್ಲಿನ ಬಣ ಬಡಿದಾಟಕ್ಕೆ ಮತ್ತಷ್ಟು ವೇಗ ಕೊಟ್ಟಿದೆ. ಸದ್ಯ ರಾಜ್ಯಾಧ್ಯಕ್ಷ ಪಟ್ಟಕ್ಕಾಗಿ ಪಕ್ಷದೊಳಗೆ ಜಿದ್ದಾಜಿದ್ದಿ ಏರ್ಪಟ್ಟಿದೆ. ಅಧ್ಯಕ್ಷ ಕುರ್ಚಿಗೆ ಚುನಾವಣೆ ನಡೆಯುತ್ತೆ ಅಂತಿದ್ದಂತೆ ಯತ್ನಾಳ್ ಅಂಡ್ ಟೀಂ ಫುಲ್ ಆಕ್ಟೀವ್ ಆಗಿದೆ. ನಾವು ಕೂಡ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತೇವೆ ಎಂದು ಸ್ವತಃ ಯತ್ನಾಳ್ ಅಖಾಡಕ್ಕೆ ಧುಮುಕಿದ್ದಾರೆ.. ವಿಜಯೇಂದ್ರ ವಿರುದ್ಧ ವಾಕ್ಸಮರ ಶುರುಮಾಡಿದ್ದಾರೆ.. ಇದೆಲ್ಲವನ್ನು ಗಮನಿಸಿದ ಹೈಕಮಾಂಡ್ ರಾಜ್ಯಕ್ಕೆ ರಾಧಾ ಮೋಹನ್ ದಾಸ್ ಅವರನ್ನ ಕಳಿಸಿಕೊಟ್ಟಿದೆ.. ಈ ನಿಟ್ಟಿನಲ್ಲಿ ಸರಣಿ ಸಭೆ ಮಾಡಿದ ಅವರು ಎಲ್ಲಾ ಅಭಿಪ್ರಾಯ ಸಂಗ್ರಹಿಸಿದ್ದು.. ಸಭೆಯಲ್ಲಿ ಕೋಲಾಹಲವೇ ಸೃಷ್ಟಿಯಾಗಿದೆ.

ಹೌದು.. ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷ ಪಟ್ಟಕ್ಕಾಗಿ ಪಕ್ಷದೊಳಗೆ ಸಮರ ಏರ್ಪಟ್ಟಿದ್ದು. ರಾಜ್ಯಕ್ಕೆ ರಾಧಾ ಮೋಹನ್ ದಾಸ್ ಎಂಟ್ರಿ ಕೊಟ್ಟಿದ್ದಾರೆ, ಸರಣಿ ಸಭೆಯನ್ನು ಮಾಡಿದ್ದಾರೆ. ರಾಜ್ಯಾಧ್ಯಕ್ಷರ ಚುನಾವಣೆಗೆ ಕೌಂಟ್‌ಡೌನ್ ಶುರುವಾಗಿದ್ದು.. ಈ ಸಭೆ ಸಾಕಷ್ಟು ಮಹತ್ವವನ್ನು ಪಡೆದುಕೊಂಡಿದೆ. ನಿರೀಕ್ಷೆಯಂತೆ ಸಭೆಯಲ್ಲಿ ಮಾತನಾಡಿದ ಶಾಸಕರು, ವಿಜಯೇಂದ್ರ ಪರ ಬ್ಯಾಟಿಂಗ್ ಮಾಡಿದ್ರೆ, ಯತ್ನಾಳ್ ವಿರುದ್ಧ ಅಸಮಾಧಾನವನ್ನು ಹೊರಹಾಕಿದ್ದಾರೆ.. ಯತ್ನಾಳ್ ಅಂಡ್ ಟೀಂ ವಿಜಯೇಂದ್ರ ಹಾಗೂ ಅವರ ಕುಟುಂಬವನ್ನು ಟಾರ್ಗೆಟ್ ಮಾಡುತ್ತಿದೆ. ವಿಜಯೇಂದ್ರ ಅವರ ವಯಸ್ಸಿನ ವಿಷ್ಯಾ ಈಗ ಯಾಕೆ ಬೇಕು, ಯತ್ನಾಳ್ ಸಣ್ಣ ವಯಸ್ಸಿನಲ್ಲೇ ಕೇಂದ್ರ ಸಚಿವರು ಆಗಲಿಲ್ಲವೇ, ಅದೇ ರೀತಿ ವಿಜಯೇಂದ್ರ ಅವರಿಗೂ ಅವಕಾಶ ಸಿಕ್ಕಿದೆ. ವರಿಷ್ಠರು ಇದಕ್ಕೆ ಮಧ್ಯಪ್ರವೇಶ ಮಾಡಿ ಬ್ರೇಕ್ ಹಾಕಬೇಕು, ನಮಗಾಗಿ ಕಾಂಗ್ರೇಸ್ ವಿರುದ್ಧ ಎಷ್ಟೊಂದು ವಿಷಯಗಳು ಇವೆ. ಆದ್ರೆ ಹೋರಾಟ ಮಾಡಲು ಯಾವುದು ಸಾಧ್ಯವಾಗುತ್ತಿಲ್ಲ, ಅಲ್ಲದೇ ಕಾಂಗ್ರೇಸ್‌ನಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಖಡಕ್ ಎಚ್ಚರಿಕೆ ನೀಡಿದ ಬಳಿಕ ಬಹಿರಂಗ ಹೇಳಿಕೆಗೆ ಬ್ರೇಕ್ ಬಿದ್ದಿದೆ. ನಮ್ಮ ಪಕ್ಷದಲ್ಲಿ ಹೈಕಮಾಂಡ್ ಇಲ್ಲವೇ, ಪಕ್ಷ ವಿರೋಧಿ ಚಟುವಟಿಕೆ ಬಗ್ಗೆ ವರಿಷ್ಠರು ಯಾಕೆ ವಾರ್ನ್ ಮಾಡುತ್ತಿಲ್ಲ ಎಂದು ನೇರವಾಗಿಯೇ ಶಾಸಕರು ರಾಧಾ ಮೋಹನ್ ದಾಸ್ ಅವರಿಗೆ ಪ್ರಶ್ನಿಸಿದ್ದಾರಂತೆ.

ಇದಿಷ್ಟೇ ಅಲ್ಲದೇ ರಾಜ್ಯದಲ್ಲಿ ಯಡಿಯೂರಪ್ಪ ಹೊರತು ಪಡಿಸಿ ಉನ್ನತ ನಾಯಕರು ಯಾರಿದ್ದಾರೆ, ಅವರನ್ನೇ ಅವಹೇಳನ ಮಾಡಿದ್ರೆ ಪಕ್ಷಕ್ಕೆ ಸಂಕಷ್ಟ ಎಂದಿದ್ದಾರೆ, ಜೊತೆಗೆ ಯತ್ನಾಳ್, ರಮೇಶ್ ಜಾರಕಿಹೊಳಿ ಜೊತೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ಇಲ್ಲವೇ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು, ನಮಗೆ ಕಾಂಗ್ರೇಸ್ ವಿರುದ್ಧ ಹೋರಾಡದಂತೆ ಆಗಿದೆ. ಕಾಂಗ್ರೇಸ್ ತನ್ನ ವೈಫಲ್ಯಗಳಿಂದ ಅನೇಕ ಅಸ್ತ್ರ ನೀಡುತ್ತಿದೆ. ಆದರೆ ಅವುಗಳನ್ನು ಬಳಸಲು ವಿರೋಧ ಪಕ್ಷ ವಾದ ನಮಗೆ ಬಳಸಲು ಆಗುತ್ತಿಲ್ಲ, ನಮ್ಮ ಪಕ್ಷದ ನಾಯಕರ ವಿರುದ್ಧವೇ ನಮ್ಮವರೇ ಹೇಳಿಕೆ ನೀಡಿದ್ರೆ ಜನರಿಗೆ ನಾವು ಏನು ಉತ್ತರ ಕೊಡಬೇಕು, ಬಿಜೆಪಿ ಬಣ ರಾಜಕೀಯವೇ ಇಲ್ಲಿ ಹೈಲೇಟ್ ಆಗುತ್ತಿದೆ ಎಂದು ಶಾಸಕರು ದೂರು ನೀಡಿದ್ದಾರೆ..

ಹೀಗೆ ಶಾಸಕರು ರಾಧ ಮೋಹನ್ ದಾಸ್ ಬಳಿ ಯತ್ನಾಳ್ ವಿರುದ್ಧ ಸರಣಿ ಆರೋಪ ಮಾಡುತ್ತಿದ್ದಂತೆ ರಾಧ ಮೋಹನ್ ದಾಸ್ ಗರಂ ಆಗಿದ್ದಾರೆ. ಶಾಸಕ ಯತ್ನಾಳ್ ಮಾಡುತ್ತಿರುವುದು ತಪ್ಪು ಹೌದು, ಅದೆಲ್ಲವನ್ನು ನೋಡೋಕೆ ಹೈಕಮಾಮಡ್ ಇದೆ. ಹಾಗಾದ್ರೆ ನೀವೇಲ್ಲ ಏನು ಮಾಡ್ತಿದ್ದೀರಾ ಎಂದು ಆಕ್ರೋಶ ವ್ಯಕ್ತಪಡಿಸಿದರು, ಅಷ್ಟೇ ಅಲ್ಲ ಚುನಾವಣೆ ವೇಳೇ ರೇಣುಕಾಚಾರ್ಯ, ಪ್ರೀತಂ ಗೌಡ ಮಾಡಿದ್ದೇನು. ಎಂದು ಪ್ರಶ್ನಿಸಿದರು. ಈ ಬೆಳವಣಿಗೆ ಹೈಕಮಾಂಡ್ ಗಮನಕ್ಕೆ ಇದೆ.. ಎಲ್ಲಾವೂ ಸರಿ ಹೋಗುತ್ತೆ ಮೊದಲು ಗುಂಪುಗಾರಿಕೆ ಬಿಡಿ ಎಂದು ಕಿವಿ ಮಾತು ಹೇಳಿದ್ದಾರೆ.. ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮನೆಯಲ್ಲಿ ಸಭೆ ನಡೆಸಿರುವ ಮಾಜಿ ಶಾಸಕರು, ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೆಂದ್ರ ಅವರೇ ಮುಂದುವರಿಯಬೇಕು ಎಂದು ಒತ್ತಾಯಿಸಿದ್ದಾರೆ.

ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮನೆಯಲ್ಲಿ ಸೇರಿದ್ದ ಮಾಜಿ ಶಾಸಕರು ಮತ್ತು ಸಚಿವರು, ಪಕ್ಷದ ಹಿತದೃಷ್ಟಿಯಿಂದ ಸದ್ಯ ವಿಜಯೇಂದ್ರ ಅವರೇ ಮುಂದುವರಿಯುವುದು ಸೂಕ್ತ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸದ್ಯ ಬಿಜೆಪಿಯಲ್ಲಿ ಅಧ್ಯಕ್ಷ ಪಟ್ಟಕ್ಕಾಗಿ ಕಾಳಗವೇ ಶುರುವಾಗಿದೆ. ಯತ್ನಾಳ್ ಹಾಗೂ ವಿಜಯೇಂದ್ರ ಮಧ್ಯೆ ಕುರ್ಚಿ ಫೈಟ್ ಆರಂಭವಾಗಿದೆ. ಇಬ್ಬರ ಜಗಳ ತಾರಕಕ್ಕೇರಿದ್ದು, ಸದ್ಯ ಹೈಕಮಾಂಡ್ ಎಂಟ್ರಿ ಕೊಟ್ಟಿದ್ದು ಎದ್ದಿರುವ ಅಸಮಾಧನವನ್ನು ಹೇಗೆ ತಣಿಸುತ್ತೆ ಅನ್ನೋದೇ ಸದ್ಯದ ಕುತೂಹಲ.

1 ಬದಲಾವಣೆ ಮಾಡಿದ್ದಲ್ಲಿ ಉಂಟಾಗುವ ಪರಿಣಾಮದ ಬಗ್ಗೆ ಹೈಕಮಾಂಡ್ ಆತಂಕ!

2 ಲಿಂಗಾಯತ ಸಮುದಾಯದ ವಿರೋಧ ಎದುರಾಗುವ ಸಾಧ್ಯತೆ

3 ರೆಬೆಲ್ ತಂಡಕ್ಕೆ ಮಣೆ ಹಾಕಲಾಗಿದೆ ಎಂಬ ತಪ್ಪು ಸಂದೇಶ

4 ಲಿಂಗಾಯತ ಸಮುದಾಯಕ್ಕೆ ಪರ್ಯಾಯ ಆಯ್ಕೆ ಇಲ್ಲದೇ ಇರುವುದು

ಸ್ಪರ್ಧೆಗೆ ಸೂಕ್ತ ಅಭ್ಯರ್ಥಿ ರೆಡಿ

ಹಾಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಬಿ.ವೈ.ವಿಜಯೇಂದ್ರ ಅವರ ವಿರುದ್ಧ ಸಮರ್ಥ ಅಭ್ಯರ್ಥಿಯೊಬ್ಬರನ್ನು ಕಣಕ್ಕೆ ಇಳಿಸುವ ಬಗ್ಗೆ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣ ಚಿಂತನೆ ನಡೆಸಿದ್ದು, ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಅವರ ಪುತ್ರ ಹಾಗೂ ಮಾಜಿ ಶಾಸಕರಾದ ಕುಮಾರ್ ಬಂಗಾರಪ್ಪ ಅವರನ್ನ ಅಭ್ಯರ್ಥಿಯನ್ನಾಗಿ ಮಾಡಬೇಕು ಎಂದು ಯತ್ನಾಳ್ ಬಣ ಚಿಂತನೆ ನಡೆಸಿದೆ. ಈಗಾಗಲೇ ಕುಮಾರ್ ಬಂಗಾರಪ್ಪ ಅವರ ನಿವಾಸದಲ್ಲಿ ಯತ್ನಾಳ್ ಬಣ ಈ ಬಗ್ಗೆ ಚಿಂತನೆ ನಡೆಸಿದ್ದಾರೆ ಎಂದು ಹೇಳಲಾಗಿದೆ.

ಕರ್ನಾಟಕದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಇಲ್ಲಿ ತನಕ ಬ್ಯಾಲೆಟ್ ಪೇಪರ್ ಮತದಾನ ಆಗಿಯೇ ಇಲ್ಲ. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಒಂದು ಸಲ ಗುಪ್ತ ಚೀಟಿ ಮತದಾನ ಆಗಿದ್ರೆ, ವಿರೋಧ ಪಕ್ಷದ ಸ್ಥಾನಕ್ಕೆ ಒಂದು ಸಲ ಗುಪ್ತ ಚೀಟಿ ಮತದಾನ ಆಗಿದೆ. ಈ ನಡುವೆ 1985 ರಲ್ಲಿ ಎ.ಕೆ.ಸುಬ್ಬಯ್ಯ ವರ್ಸಸ್ ಬಿ.ಬಿ.ಶಿವಪ್ಪ ನಡುವಿನ ಸ್ಪರ್ಧೆ, 2003 ರಲ್ಲಿ ಅನಂತ್ ಕುಮಾರ್ ವರ್ಸಸ್ ಯಡಿಯೂರಪ್ಪ ನಡುವಿನ ಸ್ಪರ್ಧೆಯಲ್ಲಿ ಅಭಿಪ್ರಾಯ ಸಂಗ್ರಹದ ಮೂಲಕ ಬಲಾಬಲ ನೋಡಿ ರಾಜ್ಯಾಧ್ಯಕ್ಷ ಹುದ್ದೆ ಘೋಷಣೆಯೂ ನಡೆದಿರುವ ಉದಾಹರಣೆಗಳು ಇವೆ.

ಬಿಜೆಪಿ ರಾಜ್ಯಾಧ್ಯಕ್ಷರ ರೋಚಕ ರೇಸ್ ಮೆಲುಕು!

1985 ಎ.ಕೆ.ಸುಬ್ಬಯ್ಯ ವರ್ಸಸ್ ಬಿ.ಬಿ.ಶಿವಪ್ಪ ನಡುವೆ ರಾಜ್ಯಾಧ್ಯಕ್ಷ ಹುದ್ದೆ ಸ್ಪರ್ಧೆ ಆಗ ಅಭಿಪ್ರಾಯ ಸಂಗ್ರಹದಲ್ಲಿ ಮೇಲುಗೈ ಸಾಧಿಸಿ ಬಿ.ಬಿ.ಶಿವಪ್ಪ ಅಧ್ಯಕ್ಷರಾದ್ರು.

1999 ರಲ್ಲಿ ವಿರೋಧ ಪಕ್ಷದ ಸ್ಥಾನಕ್ಕೆ ಬಿ.ಬಿ.ಶಿವಪ್ಪ ವರ್ಸಸ್ ಜಗದೀಶ್ ಶೆಟ್ಟರ್ ನಡುವೆ ಗುಪ್ತ ಚೀಟಿ ಮತದಾನ ಆಗಿತ್ತು. ಆಗ ಜಗದೀಶ್ ಶೆಟ್ಟರ್ ಗೆದ್ದು ವಿರೋಧ ಪಕ್ಷದ ನಾಯಕರಾಗಿದ್ದರು.

2000 ಇಸವಿ ಬಸವರಾಜ ಪಾಟೀಲ್ ಸೇಡಂ, ಡಾ.ಎಂ.ಆರ್.ತುಂಗಾ ಅವರ ನಡುವೆ ಸ್ಪರ್ಧೆ ಏರ್ಪಾಟ್ಟಾಗ ಗುಪ್ತ ಚೀಟಿ ಮತದಾನ ಮಾಡಿದ್ದ ಹೈಕಮಾಂಡ್. ಆಗ ಬಸವರಾಜ ಪಾಟೀಲ್ ಸೇಡಂ ಗೆದ್ದು ಅಧ್ಯಕ್ಷರಾಗಿದ್ದರು.

2003 ರಲ್ಲಿ ಯಡಿಯೂರಪ್ಪ ವರ್ಸಸ್ ಅನಂತ ಕುಮಾರ್ ನಡುವೆ ರಾಜ್ಯಾಧ್ಯಕ್ಷ ಹುದ್ದೆ ಫೈಟ್ ನಡೆದಿತ್ತು. ಆಗ ಅಭಿಪ್ರಾಯ ಸಂಗ್ರಹದಲ್ಲಿ ಅನಂತಕುಮಾರ್ ಮೇಲುಗೈ ಸಾಧಿಸಿ ಅಧ್ಯಕ್ಷರಾಗಿದ್ದರು.

ಜನಾರ್ದನ ರೆಡ್ಡಿ ನನ್ನನ್ನು ರಾಜಕೀಯವಾಗ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ

ತಪೋವಿದ್ಯಾ ವಿಶೇಷೇಣ ಪೂಜಯಂತಿ ಪರಸ್ಪರಂ

ಬ್ರಹ್ಮವಿದ್ಪ್ರಃ ಪರಂ ಭೂತಂ ನ ಕಿಂಚಿದಿಹ ವಿದ್ಯತೇ. ಮನುಸ್ಮೃತಿಯ ಪ್ರಥಮಾಧ್ಯಾಯದ ಶ್ಲೋಕ. ತಪಸ್ಸು ಶ್ರೇಷ್ಠವಾದ ವಿದ್ಯೆಯಿಂದ ಪರಸ್ಪರರು ಪೂಜಿಸುತ್ತಾರೆ. ಬ್ರಹ್ಮಜ್ಞಾನಿಗಳಿಗಿಂತ ಶ್ರೇಷ್ಠ ವ್ಯಕ್ತಿ ಯಾರೂ ಇಲ್ಲ. ತಪಸ್ಸು ಕಷ್ಟಪಡುವುದು ಪರಿಶ್ರಮದ ಪ್ರಾಮಾಣಿಕ ದುಡಿಮೆಯ ಜೀವನ ಇಂದ್ರಿಯ ನಿಗ್ರಹ ಧ್ಯಾನ ಜಪ ಪೂಜೆ ಪುನಸ್ಕಾರ ದಾನ ಧರ್ಮ. ವಿದ್ಯಾ ವಿಶೇಷ ಮಾನಸಿಕ ಸಂತೋಷ ನೀಡುವ ದೈಹಿಕ ಆರೋಗ್ಯ ವರ್ಧಿಸುವ ಸಂಸ್ಕೃತಿ ಸದಾಚಾರ ನೈತಿಕ ಮೌಲ್ಯ ಆಧ್ಯಾತ್ಮಿಕ ಜ್ಞಾನ ಹೊರಸೂಸುವ ವೇದಾಂತ ಯೋಗ ಸಂಗೀತ ಸ್ತೋತ್ರಪಠಣ ಮುಂತಾದ ವಿದ್ಯೆಯಿಂದ ವ್ಯಕ್ತಿಯು ಸಮಾಜದಲ್ಲಿ ಗೌರವವನ್ನು ಹೊಂದುತ್ತಾನೆ. ಇಂಥ ಗೌರವಾನ್ವಿತ ವ್ಯಕ್ತಿಗಳು ಯಾವುದೇ ಅಹಮಿಕೆಯಿಲ್ಲದೇ ಪರಸ್ಪರರು ಪರಸ್ಪರರನ್ನು ಗೌರವಿಸುತ್ತಾರೆ. ಸಿದ್ಧೇಶ್ವರ ಸ್ವಾಮಿಗಳಂತೆ. ಲೋಕದಲ್ಲಿ ಜಾತಿ ಅಧಿಕಾರ ರೂಪ ಸಿರಿತನದಿಂದ ವ್ಯಕ್ತಿ ಗೌರವವನ್ನು ಪಡೆಯುತ್ತಾನೆ. ಆದರೆ ಪಾರಮಾರ್ಥಿಕ ತನ್ನ ಸ್ವಸ್ವರೂಪ ಬ್ರಹ್ಮಜ್ಞಾನ ತಿಳಿದವರಿಗಿಂತ ಹೆಚ್ಚಿನ ಗೌರವಾನ್ವಿತರು ಬೇರೆ ಯಾರೂ ಆಗಲಾರರು.

ಸಾವಯವ ಸಿರಿಧಾನ್ಯ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ ಆಯೋಜನೆ

• ಉದಯವಾಹಿನಿ, ಬೆಂಗಳೂರು

ಕೃಷಿ ಇಲಾಖೆ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ಜನವರಿ 23 ಜನವರಿ 25ರ ವರೆಗೆ 'ಸಾವಯವ ಮತ್ತು ಸಿರಿಧಾನ್ಯ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ'ವನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ ಇದೇ 23 ರಿಂದ 25ರ ವರೆಗೆ 'ಸಾವಯವ ಮತ್ತು ಸಿರಿಧಾನ್ಯ ಅಂತಾರಾಷ್ಟ್ರೀಯ ವಾಣಿಜ್ಯ ಮೇಳ 2025' ಅನ್ನು ಹಮ್ಮಿಕೊಳ್ಳಲಾಗಿದೆ. ಮೂರು ದಿನ ನಡೆಯುವ ಈ ಮೇಳದಲ್ಲಿ 300ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗುವುದು. 30ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ತಜ್ಞರು ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳ ಕುರಿತು ಮಾಹಿತಿ ಹಂಚಿಕೊಳ್ಳಲಿದ್ದಾರೆ ಎಂದು ಕೃಷಿ ಸಚಿವರಾದ ಎನ್.ಚಲುವರಾಯಸ್ವಾಮಿ ಅವರು ತಿಳಿಸಿದ್ದಾರೆ.

ದಾಸರ ಪದಗಳ ಗಾಯನ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಪವಮಾನಪುರದ ಒಂದನೇ ಮುಖ್ಯ ರಸ್ತೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ಯರ ನೇತೃತ್ವದಲ್ಲಿ ಜನವರಿ 23, ಗುರುವಾರ ಸಂಜೆ 7-00ಕ್ಕೆ ಕು|| ಎನ್. ಧನ್ಯಾ, ಮೈಸೂರು ಇವರಿಂದ ದಾಸರ ಪದಗಳ ಗಾಯನ ಕಾರ್ಯಕ್ರಮ ಏರ್ಪಡಿಸಿದ್ದು, ಇವರ ಗಾಯನಕ್ಕೆ ಪಿಟೀಲು ವಾದನದಲ್ಲಿ ಶ್ರೀ ಎಸ್. ಶಶಿಧರ್ ಮತ್ತು ಮೃದಂಗ ವಾದನದಲ್ಲಿ ಶ್ರೀ ಶ್ರೀನಿವಾಸ್ ಅನಂತರಾಮಯ್ಯ ಸಾಥ್ ನೀಡಲಿದ್ದಾರೆ ಎಂದು ಶ್ರೀ ಗೊಗ್ಗಿ ಕೃಷ್ಣಾಚಾರ್ ತಿಳಿಸಿದ್ದಾರೆ.

2019 ಪ್ರಶಸ್ತಿ ಘೋಷಣೆ : ಅತ್ಯುತ್ತಮ ನಟ ಪ್ರಶಸ್ತಿ ಪಡೆದ ಕಿಚ್ಚ ಸುದೀಪ್

• ಉದಯವಾಹಿನಿ, ಬೆಂಗಳೂರು

2019ನೇ ಸಾಲಿನ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಘೋಷಣೆಯಾಗಿದ್ದು, ಪೈಲ್ವಾನ್ ಚಿತ್ರದಲ್ಲಿ ನಟಿಸಿದ ನಟ ಕಿಚ್ಚ ಸುದೀಪ್ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ದೊರಕಿದೆ. ಇನ್ನು ಅದೇ ರೀತಿಯಾಗಿ ಪಿ ಶೇಷಾದ್ರಿ ನಿರ್ದೇಶನದ ಮೋಹನದಾಸ ಅತ್ಯುತ್ತಮ ಚಿತ್ರ ಪ್ರಶಸ್ತಿ, ಡಾರ್ಲಿಂಗ್ ಕೃಷ್ಣ ನಿರ್ದೇಶನದ ಲವ್ ಮಾಸ್ಟೆಲ್‌ಗೆ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ ದೊರೆತಿದೆ. ಇನ್ನು ಪೈಲ್ವಾನ್ ಚಿತ್ರದಲ್ಲಿ ನಟಿಸಿದ ನಟ ಕಿಚ್ಚ ಸುದೀಪ್ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ದೊರಕಿದೆ. ಅಲ್ಲದೇ ತ್ರಯಂಬಕಂ ಸಿನಿಮಾಗಾಗಿ ಅನುಪಮ ಗೌಡಗೆ ಅತ್ಯುತ್ತಮ ನಟಿ ಪ್ರಶಸ್ತಿ ಸಿಕ್ಕಿದೆ. ತಬಲ ನಾಣಿಗೆ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಸಿಕ್ಕಿದೆ. ಕೆಮೆಸ್ಟ್ರಿ ಆಫ್ ಕರಿಯಪ್ಪ ಚಿತ್ರಕ್ಕೆ ತಬಲ ನಾಣಿಗೆ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಸಿಕ್ಕಿದೆ. ಅದೇ ರೀತಿಯಾಗಿ ಅನುಷಾ ಕೃಷ್ಣಗೆ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಸಿಕ್ಕಿದೆ. ಬ್ರಾಹ್ಮ ಚಿತ್ರಕ್ಕಾಗಿ ಅನುಷಾ ಕೃಷ್ಣಾಗೆ ಈ ಪ್ರಶಸ್ತಿ ಲಭಿಸಿದೆ.



ಮಾಜಿ ಪ್ರಧಾನಿ ನೆಹರು ಬಗ್ಗೆ ಅವಹೇಳನಕಾರಿ ಹೇಳಿಕೆ : ಶಾಸಕ ಯತ್ನಾಳ್ ವಿರುದ್ಧ ದೂರು

• ಉದಯವಾಹಿನಿ, ಬೆಂಗಳೂರು

ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಬಗ್ಗೆ ಅವಹೇಳನಕಾರಿ ಹೇಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ದೂರು ದಾಖಲಾಗಿದೆ. ಈ ಬಗ್ಗೆ ಕಾಂಗ್ರೇಸ್ ಟ್ವಿಟ್ ಮಾಡಿದ್ದು ಮಾಜಿ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಬಗ್ಗೆ ಅವಹೇಳನಕಾರಿ ಮಾತನಾಡಿರುವ ಮಾಜಿ ಕೇಂದ್ರ ದಾಖಲಾಗಿದೆ. ಮುಂಚೂಣಿ ಸ್ವಾತಂತ್ರ್ಯ ಹೋರಾಟಗಾರ, ಹಿರಿಯ ಕಾಂಗ್ರೇಸ್ ನಾಯಕ, ದೇಶದ ಮೊದಲ ಪ್ರಧಾನಿಗಳಾದ ಜವಾಹರ ಲಾಲ್ ನೆಹರು ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ 'ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ' ಅವರನ್ನು ಕೊಲ್ಲಿಸಿದ್ದು ನೆಹರೂ ಎನ್ನುವ ಮೂಲಕ ಯತ್ನಾಳ್ ಅಕ್ಷಮ್ಯ ಹೇಳಿಕೆ ನೀಡಿದ್ದಾರೆ. ಯತ್ನಾಳ್ ಅವರನ್ನು ಈ ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರ ನೇತೃತ್ವದಲ್ಲಿ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ ಎಂದು ಟೀಟ್ ಮಾಡಿದೆ.

ಅಪಘಾತದಲ್ಲಿ ಮೃತಪಟ್ಟ 14 ಮಂದಿ ಕುಟುಂಬಗಳಿಗೆ ತಲಾ 3 ಲಕ್ಷ ರೂ. ಪರಿಹಾರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಎರಡು ಪ್ರತ್ಯೇಕ ಅಪಘಾತದಲ್ಲಿ 14 ಮಂದಿ ಸಾವನ್ನಪ್ಪಿದ್ದು, ಈ ಘಟನೆ ಬಗ್ಗೆ ಸಿಎಂ ಸಿದ್ದರಾಮಯ್ಯ ಸಂತಾಪ ಸೂಚಿಸಿದ್ದು, ಮೃತರ ಕುಟುಂಬಗಳಿಗೆ ತಲಾ 3 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ತಿಳಿಸಿದ್ದಾರೆ. ಈ ಕುರಿತು ಟ್ವಿಟ್ ಮಾಡಿರುವ ಸಿಎಮ್ ಸಿದ್ದರಾಮಯ್ಯ, ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ ರಾಜ್ಯ ಸರ್ಕಾರದ ವತಿಯಿಂದ ತಲಾ ರೂ.3 ಲಕ್ಷ ಪರಿಹಾರ ನೀಡಲಾಗುವುದು. ಜೊತೆಗೆ ಅಪಘಾತದಲ್ಲಿ ಗಾಯಗೊಂಡವರ ಉಚಿತ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು ಅವಸರ ಅತಿ ವೇಗದ ಚಾಲನೆ ಹಾಗೂ ಅಜಾಗರೂಕತೆ ಅಪಘಾತಕ್ಕೆ ಕಾರಣ. ಎಚ್ಚರಿಕೆಯಿಂದ ವಾಹನ ಚಲಾಯಿಸಿ, ಸುರಕ್ಷಿತರಾಗಿರಿ ಎಂದು ಮನವಿ ಮಾಡಿದ್ದಾರೆ.

ಕಾಂಗ್ರೇಸ್‌ನಲ್ಲಿ ತ್ಯಾಗದ ಮಾತು, ಕುತೂಹಲಕ್ಕೆ ಕಾರಣವಾಗಿದೆ ಖರ್ಗೆ ಹೇಳಿಕೆ

ಮೊನ್ನೆಯಷ್ಟೇ ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರ ತ್ಯಾಗ ಮನೋಭಾವದ ಕುರಿತು ಹೇಳಿಕೆ

• ಉದಯವಾಹಿನಿ, ಬೆಂಗಳೂರು

ಹೈಕಮಾಂಡ್ ಖಡಕ್ ಎಚ್ಚರಿಕೆ ಬಳಿಕ ಕಾಂಗ್ರೇಸ್‌ನಲ್ಲಿನ ಭಿನ್ನಮತದ ಹೇಳಿಕೆಗಳು ತಣ್ಣಗಾಗಿದ್ದು, ಈಗ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅಧಿಕಾರದ ತ್ಯಾಗದ ಮಾತುಗಳನ್ನಾಡಿರುವುದು ನಾನಾ ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗಿದ್ದು, ಮತ್ತೆ ಆಂತರಿಕ ಚರ್ಚೆಗೆ ಅವಕಾಶ ಒದಗಿಸಿಕೊಟ್ಟಿದೆ.

ಮೊನ್ನೆಯಷ್ಟೇ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರ ತ್ಯಾಗ ಮನೋಭಾವದ ಕುರಿತು ಹೇಳಿಕೆ ನೀಡಿದ್ದರು. ಧರ್ಮಸಿಂಗ್ ಕಾಲದಿಂದಲೂ ನಾನು ತ್ಯಾಗ ಮಾಡಿಕೊಂಡೇ ಬರುತ್ತಿದ್ದೇನೆ. ನನಗೆ ಇದೇನು ಹೊಸದಲ್ಲ. ಜನರಿಗೆ ಒಳ್ಳೆಯದಾದರೆ ಸಾಕು ಎಂದು ಅವರು ತ್ಯಾಗದ ಮಾತುಗಳನ್ನಾಡಿದ್ದರು. ಖರ್ಗೆಯವರ ಹೇಳಿಕೆ ಯಾರ ತ್ಯಾಗಕ್ಕೆ ಸಂಬಂಧಪಟ್ಟಿದ್ದು ಎಂಬ ಪ್ರಶ್ನೆ ಈಗ ಗಂಭೀರ ಚರ್ಚೆಗೆ ಕಾರಣವಾಗಿದೆ. ಕೆಲದಿನಗಳ ಹಿಂದಷ್ಟೇ ಕಾಂಗ್ರೇಸ್‌ನಲ್ಲಿ ಕಾವೇರಿದ ಚರ್ಚೆಗಳಾಗಿದ್ದವು. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆಯ ಬಗ್ಗೆ ದೆಹಲಿಯಲ್ಲಿ ಒಪ್ಪಂದಗಳಾಗಿವೆ. ಅದರಂತೆ ಎರಡೂವರೆ ವರ್ಷದ ಬಳಿಕ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಬೇಕು. ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ. ಶಿವಕುಮಾರ್ ತಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬೆಲ್ಲಾ ಚರ್ಚೆಗಳಾಗಿದ್ದವು. ಈ ಕುರಿತಂತೆ ಕಾಂಗ್ರೇಸ್ನಲ್ಲಿ ಸಾಕಷ್ಟು ವ್ಯಾಖ್ಯಾನಗಳು ನಡೆದಿದ್ದವು. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರ ನಡುವೆ ಬಣ ರಾಜಕೀಯ ವ್ಯಾಪಕವಾಗಿತ್ತು. ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರು ಸಿದ್ದರಾಮಯ್ಯನವರ ಅಧಿಕಾರ ತ್ಯಾಗದ ಬಗ್ಗೆ ಹೇಳಿಕೆ ನೀಡಿದರೆ ಸಿದ್ದರಾಮಯ್ಯನವರ ಬೆಂಬಲಿಗರು ಒಬ್ಬರಿಗೆ ಒಂದೇ ಹುದ್ದೆ ಎಂಬ ವಾದವನ್ನಿಟ್ಟುಕೊಂಡು ಡಿ.ಕೆ. ಶಿವಕುಮಾರ್ ಅಧ್ಯಕ್ಷ ಸ್ಥಾನ ಅಥವಾ ಉಪಮುಖ್ಯಮಂತ್ರಿ ಈ ಎರಡರಲ್ಲಿ ಒಂದನ್ನು ಮಾತ್ರ ಉಳಿಸಿಕೊಳ್ಳಬೇಕೆಂದು ಪ್ರತಿಪಾದಿಸಿದ್ದರು.

ಸಿದ್ದರಾಮಯ್ಯನವರ ಅಧಿಕಾರ ತ್ಯಾಗದ ಬಗ್ಗೆ ಹೇಳಿಕೆ

ಇದು ಕಾವೇರಿದ ಮಟ್ಟಕ್ಕೆ ಹೋದಾಗ ಮಲ್ಲಿಕಾರ್ಜುನ ಖರ್ಗೆಯವರೇ ಮಧ್ಯಪ್ರವೇಶ ಮಾಡಿ ಎಲ್ಲರೂ ಬಾಯಿ ಮುಚ್ಚಿಕೊಂಡು ತಮ ಕೆಲಸ ತಾವು ಮಾಡಬೇಕು. ಅಧಿಕಾರದ ಬಗ್ಗೆ ಹೈಕಮಾಂಡ್ ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಹೇಳುವ ಮೂಲಕ ನಾನಾ ರೀತಿಯ ಚರ್ಚೆಗಳಿಗೆ ಕಡಿವಾಣ ಹಾಕಿದ್ದರು. ಈ ಬಳಿಕ ಗೃಹಸಚಿವ ಪರಮೇಶ್ವರ್ ಮಾತನಾಡಿ, ಹೈಕಮಾಂಡ್ನ ಆದೇಶವಾಗಿದೆ. ತಾವು ಯಾವುದೇ ವಿಚಾರವನ್ನೂ ಅದರಲ್ಲೂ ಕಾಂಗ್ರೇಸ್ ವಿಚಾರವನ್ನು ಬಹಿರಂಗವಾಗಿ ಚರ್ಚೆ ಮಾಡುವುದಿಲ್ಲ ಎಂದು ತಟಸ್ಥ ನಿಲುವಿಗೆ ಶರಣಾಗಿದ್ದು, ಪರಿಸ್ಥಿತಿ ಹೇಗೆ ಮುಂದುವರೆಯಬಹುದು ಎನ್ನುವ ಹಂತದಲ್ಲಿ ಈಗ ಅಧಿಕಾರದ ತ್ಯಾಗದ ಮಾತನ್ನಾಡಿ ಮಲ್ಲಿಕಾರ್ಜುನ ಖರ್ಗೆಯವರೇ ಮತ್ತೆ ನಾನಾ ವ್ಯಾಖ್ಯಾನಗಳನ್ನು ಹುಟ್ಟುಹಾಕಿದ್ದಾರೆ. ಡಿ.ಕೆ.ಶಿವಕುಮಾರ್ ತಮ್ಮ ಅಧಿಕಾರ ತ್ಯಾಗದ ಬಗ್ಗೆ ಈಗಾಗಲೇ ಸ್ಪಷ್ಟ ಹೇಳಿಕೆ ನೀಡಿಯಾಗಿದೆ.



> ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರು ಅಧಿಕಾರ ತೊರೆಯುವ ಮಾತಿನಲ್ಲಿ ಯಾವುದೇ ರೀತಿಯ ರಾಜಿಗೂ ಸಿದ್ಧರಿಲ್ಲ ಎಂಬ ಪರಿಸ್ಥಿತಿ ಇದೆ. ಹೀಗಾಗಿ ಖರ್ಗೆ ಹೇಳಿಕೆ ಸಾರ್ವತ್ರಿಕವೇ ಅಥವಾ ವ್ಯಕ್ತಿ ಆಧಾರಿತವೇ ಎಂಬ ಪ್ರಶ್ನೆ ಉದ್ಭವಿಸಿದೆ. ಎಲ್ಲವೂ ತಣ್ಣಗಾಗಿರುವ ಹೊತ್ತಿನಲ್ಲಿ ಅಧಿಕಾರ ತ್ಯಾಗದ ಮಂತ್ರ ಮತ್ತಷ್ಟು ಗೊಂದಲಗಳನ್ನು ಹುಟ್ಟುಹಾಕುವ ಸಾಧ್ಯತೆಯಿದೆ.

> ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ತ್ಯಾಗದ ಪೀಠದಲ್ಲಿರುವುದರಿಂದ ಅವರನ್ನು ಮತ್ತೊಮೆ ತ್ಯಾಗ ಮಾಡಿ ಎಂದು ಹೇಳಲು ಸಾಧ್ಯವಿಲ್ಲ. ಬದಲಾಗಿ ಸಿದ್ದರಾಮಯ್ಯ ಅವರಿಗೆ ಈ ಕುರಿತು ಹೇಳಿದ್ದೇ ಆಗಿದ್ದರೆ ಅದು ರಾಜ್ಯ ರಾಜಕಾರಣದಲ್ಲಿ ವಿಪ್ಲವಕ್ಕೆ ಕಾರಣವಾಗುವ ಸಾಧ್ಯತೆಯಿದೆ.

ಎಐಸಿಸಿ ಅಧ್ಯಕ್ಷರಾಗಿದ್ದ ಸೋನಿಯಾಗಾಂಧಿಯವರು ಪ್ರಧಾನಮಂತ್ರಿ ಹುದ್ದೆ ತ್ಯಾಗ ಮಾಡಿದ್ದನ್ನು ಖರ್ಗೆಯವರು ಸರಿಸಿದ್ದಾರೆ. ಇದರ ವ್ಯಾಖ್ಯಾನ ಡಿ.ಕೆ.ಶಿವಕುಮಾರ್ ಕೂಡ ಮುಖ್ಯಮಂತ್ರಿ ಹುದ್ದೆಯ ಆಸೆಯನ್ನು ತ್ಯಾಗ ಮಾಡಬೇಕೆ ಎಂಬ ಚರ್ಚೆ ಹುಟ್ಟುಹಾಕಿದೆ. ಮತ್ತೊಂದೆಡೆ ಸಿದ್ದರಾಮಯ್ಯ ಅವರಿಗೆ ಅಧಿಕಾರ ತ್ಯಾಗದ ಬೋಧನೆ ಮಾಡಿದ್ದಾರೆಯೇ ಎಂಬ ಬಗ್ಗೆಯೂ ಚರ್ಚೆಯಾಗುತ್ತಿದೆ. ಸಿದ್ದರಾಮಯ್ಯನವರು ಎಲ್ಲಿಯೂ ತ್ಯಾಗದ ಮಾತನ್ನಾಡಿಲ್ಲ. ಬದಲಾಗಿ 5 ವರ್ಷ ತಾವೇ ಮುಖ್ಯಮಂತ್ರಿಯಾಗಿರುವುದಾಗಿ ಖಚಿತ ವಿಶ್ವಾಸದೊಂದಿಗಿದ್ದಾರೆ. ಖರ್ಗೆಯ ಹೇಳಿಕೆ ನಾನಾ ರೀತಿಯ ಅರ್ಥಗಳನ್ನು ಕಲ್ಪಿಸಿದೆ.

ಮಹಾನಗರ ಪಾಲಿಕೆಯನ್ನು ವಿಭಜಿಸಿ ಅಧಿಸೂಚನೆ

• ಉದಯವಾಹಿನಿ, ಬೆಂಗಳೂರು

ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ ಅಧಿಸೂಚನೆ ಹೊರಡಿಸಲಾಗಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ನಿರ್ದಿಷ್ಟ ಪಡಿಸಲಾದ ಪರಿಮಿತಿಯುಳ್ಳ ಪ್ರದೇಶವನ್ನು ಆಡಳಿತಾತಕ ಹಿತದೃಷ್ಟಿಯಿಂದ ಪ್ರತ್ಯೇಕಿಸಿ ಧಾರವಾಡ ಮಹಾನಗರ ಪಾಲಿಕೆಯನ್ನು ಸ್ಥಾಪಿಸಿ ರಾಜ್ಯಸರ್ಕಾರ ಅಧಿಸೂಚಿಸಿದೆ. ಹೊಸದಾಗಿ ರಚಿತವಾದ ಧಾರವಾಡ ಮಹಾನಗರ ಪಾಲಿಕೆಯು 120.94 ಚದರ ಕಿ.ಮೀ. ವ್ಯಾಪ್ತಿಯನ್ನು ಒಳಗೊಳ್ಳಲಿದೆ. ಹಾಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಪ್ರದೇಶವನ್ನು ಹುಬ್ಬಳ್ಳಿ ಮಹಾನಗರ ಪಾಲಿಕೆ ಎಂದು ಮುಂದುವರೆಸಲು ಉದ್ದೇಶಿಸಲಾಗಿದೆ. ಧಾರವಾಡ ಮಹಾನಗರ ಪಾಲಿಕೆ ಹಾಗೂ ಹುಬ್ಬಳ್ಳಿ ಮಹಾನಗರ ಪಾಲಿಕೆಯ ವ್ಯಾಪ್ತಿ ಪ್ರದೇಶವನ್ನು ಪ್ರತ್ಯೇಕವಾಗಿ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಸಂಬಂಧ ನಗರಾಭಿವೃದ್ಧಿ ಇಲಾಖೆ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿದ್ದು, ಧಾರವಾಡ ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬರಲಿದೆ. ಆದರೆ ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆಗಳನ್ನು ಲಿಖಿತವಾಗಿ ಸಲ್ಲಿಸಲು ನಿನ್ನೆಯಿಂದ ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ. ಬೆಂಗಳೂರಿನ ವಿವಿ ಗೋಪುರದ ಒಂಭತ್ತನೇ ಮಹಡಿಯಲ್ಲಿರುವ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರಿಗೆ ಇಂದಿನಿಂದ 30 ದಿನದೊಳಗಾಗಿ ಆಕ್ಷೇಪಣೆ ಅಥವಾ ಸಲಹೆಗಳನ್ನು ಸಲ್ಲಿಸಬಹುದಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಉದಯವಾಹಿನಿ ಚಿತ್ರ

ಚೀನಾದ ಸೂಪರ್ ಮಾರ್ಕೆಟ್‌ನಲ್ಲಿ ಅಣ್ಣಾವ್ರ ಹಾಡು

• ಉದಯವಾಹಿನಿ, ಬೆಂಗಳೂರು

ನಮ್ಮಲ್ಲಿ ಪಬ್, ಕ್ಲಬ್ ಗೆ ಹೋಗಿ ಮೋಜು ಮಸ್ತಿ ಮಾಡುವ ಯುವ ಜನರಿದ್ದಾರೆ. ಪಾರ್ಟಿಗಳಲ್ಲಿ ಇಂಗ್ಲೀಷ್, ಹಿಂದಿ ಹಾಡುಗಳೇ ಹೆಚ್ಚಾಗಿ ಕೇಳಿಸುತ್ತದೆ. ಬೆಂಗಳೂರಿನಲ್ಲಿ ಕೆಲ ಸಮಯದ ಹಿಂದೆ ಪಬ್‌ವೊಂದರಲ್ಲಿ ಕನ್ನಡ ಹಾಡು ಹಾಕುವ ವಿಚಾರದಲ್ಲಿ ಗಲಾಟೆ ಆಗಿತ್ತು. ಕನ್ನಡ ಹಾಡು ಹಾಕಬೇಕೆಂದು ಕೆಲ ಕನ್ನಡ ಪರ ಸಂಘಟನೆಗಳು ಆಗ್ರಹಿಸಿದ್ದವು. ಇಂದಿಗೂ ಬೆಂಗಳೂರಿನ ಕೆಲ ಪಬ್ ಗಳಲ್ಲಿ ಇಂಗ್ಲೀಷ್, ಹಿಂದಿ ಹ

ವಿವಿ ಸಾಗರದ ನಾಲೆಗಳು ಸಾಂಕ್ರಾಮಿಕ ರೋಗಗಳ ತಾಣ

ಎರಡು ವರ್ಷ ಗತಿಸುತ್ತಾ ಬಂದರೂ ಯೋಜನೆ ಕಾರ್ಯರೂಪಕ್ಕೆ ಬಂದಿಲ್ಲ ಎಂಬುದು ನಗರ ನಿವಾಸಿಗಳ ಬೇಸರಕ್ಕೆ ಕಾರಣ

• ಉದಯವಾಹಿನಿ, ಹಿರಿಯೂರು

ನಗರದ ಹುಳಿಯಾರು ರಸ್ತೆ, ಪ್ರವಾಸಿ ಮಂದಿರ ವೃತ್ತದ ಸಮೀಪ ಹಾದು ಹೋಗಿರುವ ವಾಣಿ ವಿಲಾಸ ಜಲಾಶಯದ ಬಲ ಮತ್ತು ಎಡ ನಾಲೆಗಳು ಕಸ ಕಡ್ಡಿ ತುಂಬಿಕೊಂಡು ಸಾಂಕ್ರಾಮಿಕ ರೋಗ ಹರಡುವ ತಾಣಗಳಾಗಿವೆ.

ಜಲಾಶಯದ ಎರಡೂ ನಾಲೆಗಳ ಆಧುನೀಕರಣಕ್ಕೆ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್, ಕೇಂದ್ರೀಯ ಜಲ ಆಯೋಗ, ವಿಶ್ವೇಶ್ವರಯ್ಯ ನೀರಾವರಿ ನಿಗಮಗಳು ಒಟ್ಟಾಗಿ ಯೋಜನೆ ರೂಪಿಸಿದ್ದವು ಹಿರಿಯೂರು ನಗರದಲ್ಲಿ ಹಾದು ಹೋಗಿರುವ ತೆರೆದ ನಾಲೆಯನ್ನು ಮುಚ್ಚು ನಾಲೆಯನ್ನಾಗಿ ರೂಪಿಸುವ ಪ್ರಸ್ತಾವ ಅದರಲ್ಲಿ ಸೇರಿತ್ತು

ನಾಲೆಗಳು ಆಧುನೀಕರಣಗೊಂಡಲ್ಲಿ ಅಚ್ಚುಕಟ್ಟು ಪ್ರದೇಶದ ಗಡಿಯಲ್ಲಿರುವ ರೈತರ ಜಮೀನುಗಳಿಗೆ ಸರಾಗವಾಗಿ ನೀರು ಹರಿಯಲಿದೆ ಎಂದು ಆಗಿನ ಸಂಸದ ಎ.ನಾರಾಯಣಸ್ವಾಮಿ ಹೇಳಿದ್ದರು.

ಇದಾಗಿ ಎರಡು ವರ್ಷ ಗತಿಸುತ್ತಾ ಬಂದರೂ ಯೋಜನೆ ಕಾರ್ಯರೂಪಕ್ಕೆ ಬಂದಿಲ್ಲ ಎಂಬುದು

ಉದಯವಾಹಿನಿ ಚಿತ್ರ

ನಗರ ನಿವಾಸಿಗಳ ಬೇಸರಕ್ಕೆ ಕಾರಣವಾಗಿದೆ.ನಾಲೆಗಳ ಅವ್ಯವಸ್ಥೆ ನಗರದಲ್ಲಿ ಹಾದು ಹೋಗಿರುವ ಎರಡೂ ನಾಲೆಗಳಲ್ಲಿ ಕೊಳಚೆ ತುಂಬಿಕೊಳ್ಳಲು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ನಗರಸಭೆಯ ಕೊಡುಗೆಯೇ ಹೆಚ್ಚಿದೆ. ನೂತನ ಬಡಾವಣೆಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ನಿಯಮ ಪಾಲನೆ ಮಾಡಿದ್ದಲ್ಲಿ ಇಂತಹ ಅನಾಹುತಗಳಿಗೆ ಅವಕಾಶ ಆಗುತ್ತಿರಲಿಲ್ಲ ಎಂಬ ಆರೋಪ ಸಾರ್ವಜನಿಕರದ್ದಾಗಿದೆ.

ಹುಳಿಯಾರು ರಸ್ತೆಯಲ್ಲಿ ಹಾದು ಹೋಗಿರುವ ಬಲ ನಾಲೆಗೆ ಪುಷ್ಪಾಂಜಲಿ ಚಿತ್ರಮಂದಿರದ ಮೇಲ್ಮಾಗದಲ್ಲಿರುವ ಎಲ್ಲಾ ಮನೆಗಳ ತ್ಯಾಜ್ಯ, ರಾಷ್ಟ್ರೀಯ ಅಕಾಡೆಮಿ ಶಾಲೆಯ ಹಿಂಭಾಗದ ಬಡಾವಣೆ, ಗಾಡಿ ಬಸಣ್ಣ ಬಡಾವಣೆ, ಲಕ್ಷ್ಮಮ್ಮ ಬಡಾವಣೆ, ಶ್ರೀನಿವಾಸ ಬಡಾವಣೆ, ನರಸಿಂಹಯ್ಯ ಬಡಾವಣೆ, ಜೋಸೆಫ್ ಬಡಾವಣೆ, ನಾಗಾನಾಯ್ಕನ ಹಟ್ಟಿಗೆ ಹೊಂದಿರುವ ಬಡಾವಣೆಗಳ ತ್ಯಾಜ್ಯವನ್ನು ದೊಡ್ಡ ಗಾತ್ರದ ಪೈಪ್ ಹಾಗೂ ಚರಂಡಿ ನಿರ್ಮಿಸಿ ಎಗ್ಗಿಲ್ಲದೆ ಬಿಡಲಾಗುತ್ತಿದೆ. ಈ ತಪ್ಪನ್ನು ನಿವಾಸಿಗಳ ಮೇಲೆ ಹೊರಿಸುವಂತಿಲ್ಲ, ಬದಲಿಗೆ ಬಡಾವಣೆ ಮಾಲೀಕರು ಕಾನೂನನ್ನು ತಮಗೆ ಬೇಕಾದಂತೆ ಬಳಸಿಕೊಂಡಿರುವುದು, ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು ಕೈಜೋಡಿಸಿರುವುದು ಕಾರಣ. ನಾಲೆಗೆ ಹೊಂದಿಕೊಂಡಿರುವ ಮನೆಗಳವರು ಮನೆಯಲ್ಲಿನ ಎಲ್ಲಾ ನಿರುಪಯುಕ್ತ ವಸ್ತುಗಳನ್ನು ನಗರಸಭೆಯ ಕಸದ ವಾಹನಕ್ಕೆ ಕೊಡುವ ಬದಲು ತಮಗೆ ಸಮಯ ಸಿಕ್ಕಾಗ ನಾಲೆಗೆ ಬಿಸಾಡುವ ಪರಿಪಾಠ ಇಂದಿಗೂ ಮುಂದುವರಿದಿದೆ. ಹೀಗಾಗಿ ನಾಲೆಯ ಎರಡೂ ಬದಿಯ ರಸ್ತೆಯಲ್ಲಿ ವಾಯುವಿಹಾರಕ್ಕೆ ಹೇಳಿ ಮಾಡಿಸಿದಂತಹ ಪರಿಸರವಿದ್ದರೂ ಇಡೀ ನಾಲೆ ಮಲಿನಗೊಂಡಿರುವ ಕಾರಣಕ್ಕೆ ಮೂಗು ಮುಚ್ಚಿಕೊಂಡು ನಡೆದಾಡಬೇಕಾಗಿದೆ.

ನೋಟಿಸ್ ಕೊಟ್ಟಿದ್ದಕ್ಕೆ ತಮ್ಮ ಕೆಲಸ ಮುಗಿಯಿತು ಎಂದು ನೀರಾವರಿ ನಿಗಮದವರು ಮೌನಕ್ಕೆ ಜಾರಿದರೆ, ನಗರಸಭೆಯವರು ಕ್ರಮದ ವಿಚಾರದಲ್ಲಿ ಜಾಣ ಮೌನ ಪ್ರದರ್ಶಿಸಿದ್ದರಿಂದ ನಾಲೆಗಳಲ್ಲಿನ ಮಾಲಿನ್ಯ ಮತ್ತಷ್ಟು ಹೆಚ್ಚಿದೆ. ಕೊಳಕು ನಗರದ ಪ್ರಶಸ್ತಿ ದೊರೆಯುವತ್ತ ಹಳೆಯ ಹಿರಿಯೂರು ಭಾಗದ ಬಹುತೇಕ ತ್ಯಾಜ್ಯ ವೇದಾವತಿ ನದಿಗೆ ಸೇರಿದರೆ, ಉಳಿದ ಭಾಗದ ತ್ಯಾಜ್ಯ ಎರಡು ನಾಲೆಗಳಿಗೆ ಸೇರುತ್ತಿದೆ.

ನೋಟಿಸ್ ಕೊಟ್ಟು ಸುಮ್ಮನಾದರು

ವಾಣಿ ವಿಲಾಸ ಜಲಾಶಯದ ಎರಡೂ ನಾಲೆಗಳು ವಿಶ್ವೇಶ್ವರಯ್ಯ ನೀರಾವರಿ ನಿಗಮದ ವ್ಯಾಪ್ತಿಗೆ ಸೇರಿವೆ. ಸಾರ್ವಜನಿಕರು, ರೈತ ಸಂಘಟನೆಗಳು ನಾಲೆಗಳ ಅವ್ಯವಸ್ಥೆ ಬಗ್ಗೆ ಧನಿ ಎತ್ತಿದ್ದ ರಿಂದ ನಾಲ್ಕು ವರ್ಷಗಳ ಹಿಂದೆ ನಗರಸಭೆಗೆ ನೋಟಿಸ್ ಜಾರಿ ಮಾಡಿ ಮೇಲೆ ತಿಳಿಸಿದ ಬಡಾವಣೆಗಳಲ್ಲದೆ, ಪೊಲೀಸ್ ವಸತಿಗೃಹಗಳು, ವೇದಾವತಿ ಬಡಾವಣೆಯ ತ್ಯಾಜ್ಯ ನಾಲೆಗೆ ಸೇರದಂತೆ ಎಚ್ಚರ ವಹಿಸುವಂತೆ ತಾಕೀತು ಮಾಡಿದ್ದರು.

ವಾಣಿವಿಲಾಸದ ನಾಲೆಗಳು, ನಗರದ ಮಧ್ಯಭಾಗದಲ್ಲಿ ಹಾದು ಹೋಗಿರುವ ವೇದಾವತಿ ನದಿಯನ್ನು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಪರಾಮರ್ಶಿಸಿದಲ್ಲಿ ಹಿರಿಯೂರಿಗೆ ರಾಜ್ಯಮಟ್ಟದಲ್ಲಿ ಕೊಳಕು ನಗರಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಕೊಡುತ್ತಾರೆ ಎಂದು ನಾಗರಿಕರು ಆಡಿಕೊಳ್ಳುತ್ತಿದ್ದಾರೆ. ವಾಣಿವಿಲಾಸ ಜಲಾಶಯದ ನೀರನ್ನು ಅಚ್ಚುಕಟ್ಟು ಪ್ರದೇಶಕ್ಕೆ ಬಿಡುವಾಗ ಒಂದು ಗೇಟ್‌ನಿಂದ ಮೇಲ್ಮಟ್ಟದ ಕಾಲುವೆಗೆ ಮತ್ತೊಂದು ಗೇಟ್‌ನಿಂದ ಎಡ ಮತ್ತು ಬಲನಾಲೆಗಳಿಗೆ ಬಿಡಲಾಗುತ್ತದೆ.

ಖೋಟಾ ನೋಟ್ ಪ್ರಿಂಟ್ ಮಾಡುತ್ತಿದ್ದ ತಂದೆ ಮಗ ಅರೆಸ್ಟ್

• ಉದಯವಾಹಿನಿ, ಮೈಸೂರು

ಕೇವಲ ಒಂದು ವಾರದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ದರೋಡೆ ಪ್ರಕರಣಗಳು ನಡೆದಿವೆ. ಇದೀಗ ಪೊಲೀಸರು ಈ ಒಂದು ದರೋಡೆಕೋರರ ಬೆನ್ನು ಹತ್ತಿದ್ದು, ಈಗಾಗಲೇ ಒಂದು ಪ್ರಕರಣದಲ್ಲಿ ಹಲವು ಆರೋಪಿಗಳನ್ನು ಪೊಲೀಸರು ಅರೆಸ್ಟ್ ಮಾಡಿದ್ದಾರೆ. ಇದರ ಬೆನ್ನಲ್ಲೇ ಮೈಸೂರಲ್ಲಿ ಬೆಚ್ಚಿ ಬೀಳಿಸುವಂತಹ ಘಟನೆ ವರದಿಯಾಗಿದ್ದು, ದನದ ಕೊಟ್ಟಿಗೆಯಲ್ಲಿ ಅಪ್ಪ ಮಗ ಸೇರಿ ಖೋಟಾ ನೋಟ್ ಪ್ರಿಂಟ್ ಮಾಡುತಿದ್ದರು.

ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿದ ಪೊಲೀಸರು ಇದೀಗ ಇಬ್ಬರನ್ನು ಅರೆಸ್ಟ್ ಮಾಡಿದ್ದಾರೆ. ಹೌದು ಜಿಲ್ಲೆಯ ಮಾದಾಪುರ ಬಳಿ ದನದ ಕೊಟ್ಟಿಗೆಯಲ್ಲಿ ಖೋಟಾ ನೋಟು ಪ್ರಿಂಟ್ ಮಾಡುತ್ತಿದ್ದ ಖಚಿತ ಮಾಹಿತಿಯ ಮೇರೆಗೆ ಟಿ. ನರಸೀಪುರ ಪೊಲೀಸರು ದಾಳಿ ಮಾಡಿ ಕೃತ್ಯದಲ್ಲಿ ತೊಡಗಿದ್ದ ತಂದೆ ಮತ್ತು ಮಗನನ್ನು ಬಂಧಿಸಿರುವ ಘಟನೆ ಟಿ. ನರಸೀಪುರ ತಾಲ್ಲೂಕಿನ ಹಿರಿಯೂರು ಗ್ರಾಮದಲ್ಲಿ ನಡೆದಿದೆ.

ಬಂಧಿತ ಅಪ್ಪ ಮಗನನ್ನು ಹಿರಿಯೂರು ಗ್ರಾಮದ ನಾಗೇಶ್ (25) ಹಾಗೂ ಶಿವಪ್ರಸಾದ್ (48) ಎಂದು ತಿಳಿದುಬಂದಿದೆ. ಈ ವೇಳೆ ಪೊಲೀಸರು ಕೋಟ ನೋಟ್ ಪ್ರಿಂಟ್ ಮಾಡಲು ಬಳಸುತ್ತಿದ್ದ ಎಲ್ಲಾ ಸಾಮಗ್ರಿಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಗಳು ತಾವು ಮಲಗಲು ಹಾಸಿಕೊಂಡಿದ್ದ ಹಾಸಿಗೆ ಪಕ್ಕದಲ್ಲಿ ರಟ್ಟಿನ

ಉದಯವಾಹಿನಿ ಚಿತ್ರ

ಬಾಕ್ಸ್‌ನಲ್ಲಿ ಎಪ್ಸನ್ ಕಲರ್ ಪ್ರಿಂಟರ್ ಕಂಡುಬಂದಿದೆ. ಪೊಲೀಸರು ಇನ್ನಷ್ಟು ಪರಿಶೀಲನೆ ನಡೆಸಿದಾಗ ಈ ಕೃತ್ಯಕ್ಕೆ ಬಳಸುತ್ತಿದ್ದ ಎಲ್ಲಾ ವಸ್ತುಗಳನ್ನು ಪತ್ತೆ ಹಚ್ಚಲಾಗಿದೆ ಎಂದು ತಿಳಿಸಿದ್ದಾರೆ.

ಪೊಲೀಸರು, ನೋಟು ಪ್ರಿಂಟ್ ಮಾಡಲು ಬಳಸುತ್ತಿದ್ದ ಒಂದು ಕಪ್ಪು ಬಣ್ಣದ ಎಪ್ಸನ್ ಪ್ರಿಂಟರ್, ಕಪ್ಪು ಬಣ್ಣದ ಪೇಪರ್ ಮೇಜರ್‌ಮೆಂಟ್ ಕಟಿಂಗ್ ಸ್ಕೆಲ್, ಒಂದು ಎ4 ಅಳತೆಯ ಗಾಂಧೀಜಿ ಭಾವಚಿತ್ರದ ವಾಟರ್ ಮಾರ್ಕ್ ಮತ್ತು ನೋಟಿನ ಗೆರೆಯುಳ್ಳ ಬಿಳಿ ಬಣ್ಣದ ಹಾಳೆ, 4 ಕಲರ್ ಇಂಕ್ ಬಾಟಲ್‌ಗಳು, ಎ4 ಸೈಜ್ ಅಳತೆಯ ಬಿಳಿ ಹಾಳೆಗಳು ಖೋಟಾ ನೋಟು, 2 ಮೊಬೈಲ್, ಅಡಾಪ್ಟರ್, ಕಪ್ಪು ಬಣ್ಣದ 16 ಜಿಬಿ ಪೆನ್ ಡ್ರೈವ್, ಎಟಿಎಂ ಕಾರ್ಡ್ ಸೇರಿದಂತೆ ಪ್ರಿಂಟಿಂಗ್‌ಗೆ ಬಳಸುತ್ತಿದ್ದ ಎಲ್ಲಾ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದು, ತನಿಖೆಯನ್ನು ನಡೆಸಲಾಗುತ್ತಿದೆ. ಈ ಸಂಬಂಧ ಟಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವಕನ ಕಿರುಕುಳ: ರಕ್ಷಣೆಗೆ ವಿದ್ಯಾರ್ಥಿನಿ ಮನವಿ

• ಉದಯವಾಹಿನಿ, ಸೋಮವಾರಪೇಟೆ

ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಸಂದರ್ಭ ಯುವಕನೊಬ್ಬ ಬೈಕ್‌ನಲ್ಲಿ ಬಂದು ಪ್ರತಿನಿತ್ಯ ಕಿರುಕುಳ ನೀಡುತ್ತಿದ್ದಾನೆ ನನಗೆ ರಕ್ಷಣೆ ಬೇಕು ಎಂದು ಪಿಯುಸಿ ವಿದ್ಯಾರ್ಥಿನಿ ಮಕ್ಕಳ ಗ್ರಾಮಸಭೆಯಲ್ಲಿ ಅಂಗಲಾಚಿದ ಘಟನೆ ಮಂಗಳವಾರ ನಡೆಯಿತು. ತಾಲ್ಲೂಕಿನ ಐಗೂರು ಸರ್ಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ವಿದ್ಯಾರ್ಥಿನಿ ಸಹನ ಅವರ ಅಧ್ಯಕ್ಷತೆಯಲ್ಲಿ ನಡೆದ ಐಗೂರು ಗ್ರಾಮ ಪಂಚಾಯಿತಿ ಮಕ್ಕಳ ಗ್ರಾಮಸಭೆಯಲ್ಲಿ ವಿದ್ಯಾರ್ಥಿನಿ ತನ್ನ ಅಸಹಾಯಕತೆ ತೋಡಿಕೊಂಡಳು.

ಸಂಜೆ ತರಗತಿ ಮುಗಿದ ನಂತರ ಬಸ್‌ನಲ್ಲಿ ತೆರಳಲು ತಂಗುದಾಣದಲ್ಲಿ ನಿಲ್ಲುವ ಸಂದರ್ಭದಲ್ಲಿ ಬರುವ ಯುವಕ ಕೆಟ್ಟದಾಗಿ ಕೈಸನ್ನೆ ಮಾಡುತ್ತಾನೆ. ಹೆಸರು ಕೇಳುತ್ತಾನೆ, ನನಗೆ ಕಾಲೇಜಿಗೆ ಬರಲು ಭಯವಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದಳು. ವಿದ್ಯಾರ್ಥಿನಿಗೆ ಧೈರ್ಯ ತುಂಬಿದ ಚಿನ್ಸ್ ಮೂವ್‌ಮೆಂಟ್ ಫಾರ್ ಸಿವಿಕ್ ಅವೇರ್‌ನೆಸ್ (ಸಿಎಂಸಿಎ) ಸಂಸ್ಥೆಯ ಅಸೋಸಿಯೇಟ್ ಡೈರೆಕ್ಟರ್ ಎಂ.ಪಿ. ಮರುಳಪ್ಪ ಅವರು, ನಿನಗೆ ಎಲ್ಲಾ ಭದ್ರತೆ ಒದಗಿಸುವ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿ, ಯಾವುದೇ ಕಾರಣಕ್ಕೂ ಕಾಲೇಜಿಗೆ ಬರುವುದನ್ನು ನಿಲ್ಲಿಸುವುದು ಬೇಡ ಎಂದರು ಪೊಲೀಸರಿಗೆ ಮಾಹಿತಿ

ಉದಯವಾಹಿನಿ ಚಿತ್ರ

ನೀಡುತ್ತೇನೆ. ಶಿಕ್ಷಕಿಯರು ವಿದ್ಯಾರ್ಥಿನಿಗೆ ಧೈರ್ಯ ಹೇಳಿ, ಪೂರ್ಣ ಮಾಹಿತಿ ಸಂಗ್ರಹಿಸಿ ಕೊಡಬೇಕು ಎಂದು ಪಿಡಿಒ ಪೂರ್ಣಕುಮಾರ್ ಹೇಳಿದರು.

ರಾತ್ರಿ ಸಮಯದಲ್ಲಿ ಕಾಲೇಜು ಆವರಣದಲ್ಲಿ ಮದ್ಯದ ಬಾಟಲಿಗಳನ್ನು ಒಡೆದಿರುತ್ತಾರೆ. ಶೌಚಗೃಹದ ಬಾಗಿಲು ಒಡೆದು ಹಾಕಿದ್ದಾರೆ. ಕಾಲೇಜು ಮತ್ತು ಪ್ರೌಢಶಾಲಾ ವಿಭಾಗದಲ್ಲಿ 55 ಮಂದಿ ಬಾಲಕಿಯರು ಇದ್ದೇವೆ. ಶೌಚಗೃಹದ ಸಮಸ್ಯೆಯಿದ್ದು, ಬಗೆಹರಿಸಿ, ಕಾಲೇಜು ಸುತ್ತಲು ಭದ್ರತಾ ಬೇಲಿಯ ಅವಶ್ಯಕತೆ ಇದೆ ಎಂದು ವಿದ್ಯಾರ್ಥಿಗಳಾದ ರೊಸ್ನಿ, ಸಹನಾ ಮತ್ತಿತರ ವಿದ್ಯಾರ್ಥಿನಿಯರು ಮನವಿ ಮಾಡಿದರು.

ಐಗೂರು ಗ್ರಾಮ ಪಂಚಾಯಿತಿಗೆ ಆದಾಯದ ಮೂಲಗಳಿಲ್ಲ. ಬಂದ ಅನುದಾನದಲ್ಲೇ ಶಾಲೆಗಳ ಅಭಿವೃದ್ಧಿ ಕಾರ್ಯಗಳಿಗೆ ಹಣ ವಿನಿಯೋಗಿಸಬೇಕು. ಶೌಚಗೃಹ ನಿರ್ಮಾಣ ಮಾಡಿಕೊಡಲಾಗುವುದು ಎಂದು ಪಿಡಿಒ ಭರವಸೆ ನೀಡಿದರು. ಬಸ್ ವ್ಯವಸ್ಥೆ ಕಲ್ಪಿಸಲು ಶಾಸಕ ಡಾ.ಮಂತರ್ ಗೌಡ ಅವರೊಂದಿಗೆ ಚರ್ಚಿಸುವುದಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಿನೋದ್ ಭರವಸೆ ನೀಡಿದರು. ಯಡವನಾಡು ಮಹರ್ಷಿ ವಾಲ್ಮೀಕಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಆಟದ ಮೈದಾನವೇ ಇಲ್ಲ ಎಂದು ವಿದ್ಯಾರ್ಥಿಗಳು ದೂರಿದರು. ಮಕ್ಕಳನ್ನು ರಕ್ಷಿಸಲೇ ಬೇಕಾದ ಅನಿವಾರ್ಯತೆ ಇದೆ. ಮಕ್ಕಳ ರಕ್ಷಣೆಯ ಜವಾಬ್ದಾರಿ ಇಡೀ ಸಮುದಾಯದ ಮೇಲಿದೆ ಎಂದು ಹೇಳಿದರು. ಸರ್ಕಾರಿ ಬಸ್ ವ್ಯವಸ್ಥೆ ಮಾಡಿ ಯಡವಾರ ಸುತ್ತಮುತ್ತಲಿನ ಕಾರ್ಮಿಕರ ಮಕ್ಕಳು 14 ಕಿ.ಮೀ. ನಡೆದುಕೊಂಡು ಬರಬೇಕು. ವಾಹನದ ವ್ಯವಸ್ಥೆ ಮಾಡಿಕೊಡಿ ಎಂದು ಕಾಜೂರು ಸರ್ಕಾರಿ ಶಾಲೆಯ ರೋಶಿನಿ ಹರ್ಷಿಕ ವೇಣುಗೋಪಾಲ್ ಮನವಿ ಮಾಡಿದರು.

ಮಡಿಕೇರಿ ರಸ್ತೆ ಬಜೆಗುಂಡಿ ಜಂಕ್ಷನ್‌ನಿಂದ ವಿವಿಧ ಶಾಲಾ-ಕಾಲೇಜುಗಳಿಗೆ 70 ಮಂದಿ ವಿದ್ಯಾರ್ಥಿಗಳು ಬಸ್‌ನಲ್ಲಿ ಸಂಚರಿಸುತ್ತಾರೆ. ಶಾಲಾ ಕಾಲೇಜು ಸಮಯದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳಿಲ್ಲ. ತಿಂಗಳಿಗೆ 700ರಿಂದ 1 ಸಾವಿರ ಬಸ್‌ಗೆ ಖರ್ಚಾಗುತ್ತಿದೆ. ಕೂಲಿ ಕಾರ್ಮಿಕರ ಮಕ್ಕಳ ಹೆಚ್ಚಿದ್ದಾರೆ. ಬೆಳಿಗ್ಗೆ ಸಂಜೆ ಸರ್ಕಾರಿ ಬಸ್ ವ್ಯವಸ್ಥೆ ಕಲ್ಪಿಸಬೇಕು

-ಫಾತಿಮತ್ ಫಾರಿಜಾ, ವಿದ್ಯಾರ್ಥಿನಿ

ಬಿಎಸ್‌ಎನ್‌ಎಲ್ ಟವರ್ ಅಳವಡಿಸಿದರೂ ಇಲ್ಲ ನೆಟ್ವರ್ಕ್

• ಉದಯವಾಹಿನಿ, ಕೋಣಂದೂರು

ಅಗ್ರಹಾರ ಹೋಬಳಿಯ ಸಂತೆ ಹಕ್ಕು, ಅಲಸೆ, ಬುಕ್ಕಿವರೆಯಲ್ಲಿ (ಮಸ್ಕಾನಿ) ಬಿಎಸ್‌ಎನ್‌ಎಲ್ ಟವರ್ ಅಳವಡಿಸಿ ವರ್ಷ ಕಳೆದರೂ ಕಾರ್ಯಾರಂಭ ಮಾಡಿಲ್ಲ ಇದರಿಂದ ಸಾರ್ವಜನಿಕರಿಗೆ ಸೌಲಭ್ಯ ದೊರೆಯದಂತಾಗಿದೆ.

ಸಂತೆಹಕ್ಕು, ಅಲಸೆ, ಬುಕ್ಕಿವರೆಯಲ್ಲಿ ಟವರ್‌ನ ಅಳವಡಿಕೆಯ ಎಲ್ಲಾ ಕೆಲಸಗಳು ಬಹುತೇಕ ಪೂರ್ಣ ಗೊಂಡಿವೆ ಸೋಲಾರ್ ವ್ಯವಸ್ಥೆ ಅಳವಡಿಕೆಯೂ ಮುಗಿದಿದೆ.

ಆದರೂ ಸೇವೆ ಮಾತ್ರ ಆರಂಭವಾಗಿಲ್ಲ, ಬಹುತೇಕ ಗ್ರಾಮಾಂತರ ಭಾಗದವರು ಬಿಎಸ್‌ಎನ್‌ಎಲ್ ನೆಟ್ವರ್ಕ್ ನಂಬಿಕೊಂಡಿದ್ದಾರೆ. ನೆಟ್ವರ್ಕ್ ಇದ್ದರೂ ಮಾತನಾಡಲು ಆಗುತ್ತಿಲ್ಲ.

ಬ್ಯಾಂಕ್, ಸರ್ಕಾರಿ- ಖಾಸಗಿ ಕಚೇರಿ ಕೆಲಸಗಳಲ್ಲಿ ಕೆಲಸ ಆಗುತ್ತಿಲ್ಲ. ಅಲ್ಲೆಲ್ಲ ಸರ್ವರ್ ಡೌನ್ ಎಂಬ ಉತ್ತರ ಸಾಮಾನ್ಯವಾಗಿದೆ ಎಂಬ ಆರೋಪ

ಉದಯವಾಹಿನಿ ಚಿತ್ರ

ಕೇಳಿಬರುತ್ತಿದೆ.ಗ್ರಾಮ ಪಂಚಾಯಿತಿ, ಬ್ಯಾಂಕ್, ರೈತ ಸಂಪರ್ಕ ಕೇಂದ್ರಗಳು, ಗ್ರಾಮ ಒನ್ ಕೇಂದ್ರಗಳಲ್ಲಿ ನೆಟ್ವರ್ಕ್ ಇಲ್ಲದಿದ್ದರೆ ಕೆಲಸ ಕಾರ್ಯಗಳೇ ನಡೆಯುವುದಿಲ್ಲ. ಇದರಿಂದ ರೈತರಿಗೆ, ಬ್ಯಾಂಕ್ ಗ್ರಾಹಕರಿಗೆ ತೀವ್ರ ಸಮಸ್ಯೆ ಎದುರಾಗಿದೆ.

ವಾರದಿಂದ ಇಲ್ಲ ನೆಟ್ವರ್ಕ್: ಕಳೆದ ನಾಲ್ಕೈದು ದಿನಗಳಿಂದ ಕೋಣಂದೂರು, ದೇಮ್ಲಾಪುರ ಸುತ್ತಮುತ್ತ ಬಿಎಸ್‌ಎನ್‌ಎಲ್ ನೆಟ್ವರ್ಕ್ ಸಂಪೂರ್ಣ ನಿಷ್ಕ್ರಿಯಗೊಂಡಿದೆ. ಇದರಿಂದಾಗಿ ಸಂಸ್ಥೆಗೆ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

ಪದೇಪದೇ ಸ್ಥಗಿತಗೊಳ್ಳುತ್ತಿರುವ ನೆಟ್ವರ್ಕ್ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಗ್ರಾಹಕರಿಗೆ ಸರಿಯಾದ ಸೇವೆ ದೊರಕಬೇಕು ಎಂದು ಕೋಣಂದೂರಿನ ದೇವರಾಜ ಶೆಟ್ಟಿ ಒತ್ತಾಯಿಸುತ್ತಾರೆ. ಹೊಸದಾಗಿ ನಿರ್ಮಾಣವಾದ ಟವರ್ ಗಳ ಸೇವೆ ಆದಷ್ಟು ಬೇಗ ದೊರೆಯಲು ಅಧಿಕಾರಿಗಳು ವ್ಯವಸ್ಥೆ ಮಾಡಬೇಕು. ಆ ಮೂಲಕ ಗುಣಮಟ್ಟ ಕಾಯ್ದುಕೊಳ್ಳಬೇಕು ಎಂಬುದು ಈ ಭಾಗದ ಬಹುತೇಕ ಜನರ ನಿರೀಕ್ಷೆ.

ಬಿಎಸ್ಸೆನ್ನೆಲ್ 'ಟವರ್ ಅಳವಡಿಕೆ ಕೆಲಸ ಪೂರ್ಣಗೊಂಡಿದೆ. ಪ್ರಯೋಗಾರ್ಥವಾಗಿ ಸಂಪರ್ಕ ಪರೀಕ್ಷಿಸಲಾಗುತ್ತಿದೆ. ಕೆಲವೊಂದು ತಾಂತ್ರಿಕ ಕಾರಣಗಳಿಂದ ಸೇವೆ ನೀಡುವಲ್ಲಿ ವಿಳಂಬವಾಗುತ್ತಿದೆ. 8ರಿಂದ 10 ದಿನಗಳ ಒಳಗಾಗಿ ಟವರ್‌ಗಳು ಸೇವೆ ಒದಗಿಸಲಿವೆ. ಜಲಜೀವನ್ ಮಿಷನ್ ಕಾಮಗಾರಿ ವೇಳೆ ಕೇಬಲ್ ತುಂಡಾಗಿರುವುದರಿಂದ ಕೆಲ ಭಾಗಗಳಲ್ಲಿ ಸಂಪರ್ಕಕ್ಕೆ ಅಡಚಣೆಯಾಗಿದೆ

-ಎಸ್.ಲೋಹಿತ್
ತೀರ್ಥಹಳ್ಳಿ ಟೆಲಿಕಾಂ ಅಧಿಕಾರಿ

ಶ್ರೀಗಳ ಪ್ರತಿಮೆ ನಿರ್ಮಾಣಕ್ಕೆ ಅನುದಾನ ಮೀಸಲು

• ಉದಯವಾಹಿನಿ, ತುಮಕೂರು

ಶಿವೈಕ್ಯ ಶಿವಕುಮಾರ ಶ್ರೀಗಳ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಬುಧವಾರ ಗೃಹ ಸಚಿವ ಜಿ.ಪರಮೇಶ್ವರ್ ಸಿದ್ದಗಂಗಾ ಮಠಕ್ಕೆ ಭೇಟಿ ಕೊಟ್ಟು ಶ್ರೀಗಳ ಗದ್ದಿಗೆಗೆ ಪೂಜೆ ಸಲ್ಲಿಸಿದರು. ಶಿವಕುಮಾರ ಶ್ರೀಗಳ ಸಮಾಜ ಸೇವೆಯನ್ನು ಸ್ಮರಿಸಿದರು.

ಇದೇ ವೇಳೆ ಮಾತನಾಡಿದ ಪರಮೇಶ್ವರ್, ಶಿವಕುಮಾರ ಶ್ರೀಗಳ ಹೆಸರಿನಲ್ಲಿ ಆಚರಿಸಲು ಉದ್ದೇಶಿಸಿರುವ ದಾಸೋಹ ದಿನವನ್ನು ಅರ್ಥಪೂರ್ಣವಾಗಿ ಆಚರಿಸುವಂತೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಸಿ ಕ್ರಮಕೈಗೊಳ್ಳಲಾಗುವುದು ಎಂದರು.

ಅಲ

ಅಂತರಾಳದಿಂದ... EDITORIAL

ಅರಣ್ಯ ಪ್ರದೇಶದಲ್ಲಿ ಏರಿಕೆ, ಜೀವ ವೈವಿಧ್ಯದಲ್ಲಿ ಇಳಿಕೆ!

ಇತ್ತೀಚೆಗಷ್ಟೇ ಜಗತ್ತಿನ ಜನಸಂಖ್ಯೆ ವರದಿ ಹೊರ ಬಿದ್ದು ಭಾರತ ವಿಶ್ವದಲ್ಲೇ ಅಗ್ರಸ್ಥಾನದಲ್ಲಿರುವುದನ್ನು ಬಹಿರಂಗಪಡಿಸಿತ್ತು. ಹೆಚ್ಚುತ್ತಿರುವ ಜನಸಂಖ್ಯೆ ಹೇಗೆ ಹಂತ ಹಂತವಾಗಿ ಈ ದೇಶದ ಪರಿಸರವನ್ನು ಹದಗೆಡಿಸುತ್ತಿದೆ, ವಾತಾವರಣದ ಮಾಲಿನ್ಯಕ್ಕೆ ಕಾರಣವಾಗುತ್ತಿದೆ ಎನ್ನುವುದು ಇದೇ ಸಂದರ್ಭದಲ್ಲಿ ಚರ್ಚೆಗೊಳಗಾಗಿತ್ತು ಜಾಗತಿಕ ತಾಪಮಾನ ಮತ್ತು ಹೆಚ್ಚುತ್ತಿರುವ ಜನಸಂಖ್ಯೆಯ ನಡುವಿನ ಸಂಬಂಧವೂ ವಿಶ್ಲೇಷಣೆಗೆ ಒಳಗಾಗಿದೆ. ಜನಸಂಖ್ಯೆಗೆ ಸಂಬಂಧಿಸಿದ ವರದಿಯ ಚೆನ್ನಿಗೇ ಭಾರತದ ಅರಣ್ಯ ಸ್ಥಿತಿಗತಿಯ ಬಗ್ಗೆ ನಡೆಸಿದ ಸಮೀಕ್ಷೆಯೊಂದು ಹೊರಬಿದ್ದಿದ್ದು ಕೆಲವು ಆಶಾದಾಯಕ ಸಂಗತಿಗಳನ್ನು ಅದು ಉಲ್ಲೇಖಿಸಿದೆ. ಭಾರತೀಯ ಅರಣ್ಯ ಸಮೀಕ್ಷೆಯು ತನ್ನ ಇತ್ತೀಚಿನ 18ನೇ ಭಾರತೀಯ ಅರಣ್ಯ ಸ್ಥಿತಿಗತಿ ವರದಿಯಲ್ಲಿ ಭಾರತದಲ್ಲಿ ಅರಣ್ಯ ವ್ಯಾಪ್ತಿ ಮತ್ತು ಮರಗಳ ಪ್ರಮಾಣದಲ್ಲಿ ಸಣ್ಣ ಮಟ್ಟದ ಏರಿಕೆಯಾಗಿರುವುದನ್ನು ತಿಳಿಸಿದೆ. ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಏರಿಕೆಯಾಗಿದ್ದರೂ, ಹಲವಾರು ಜೀವವೈವಿಧ್ಯಗಳಿಂದ ಸಮೃದ್ಧವಾಗಿದ್ದ ನೈಸರ್ಗಿಕ ಅರಣ್ಯ ಪ್ರದೇಶಗಳು ಕುಸಿದಿರುವ ಆಘಾತಕಾರಿ ಅಂಶವನ್ನೂ ಸಮೀಕ್ಷೆ ಬಹಿರಂಗಪಡಿಸಿದೆ. ಭಾರತದ ಒಟ್ಟು ಅರಣ್ಯ ಮತ್ತು ಮರಗಳ ವ್ಯಾಪ್ತಿ 8,27,357 ಚದರ ಕಿ.ಮೀ. ಎಂದು ವರದಿ ಹೇಳುತ್ತದೆ. ಅಂದರೆ ಇದು ದೇಶದ ಭೌಗೋಳಿಕ ಪ್ರದೇಶದ 25.17 ಶೇ. ಆಗುತ್ತದೆ. ಇದರಲ್ಲಿ 7,15,343 ಚದರ ಕಿ.ಮೀ. (21.76 ಶೇ. ಅರಣ್ಯ ವ್ಯಾಪ್ತಿ ಮತ್ತು 112,014 8.3.14) ವ್ಯಾಪ್ತಿಯಾಗಿದೆ. 2021ರ ಬಳಿಕ, ಅರಣ್ಯ ಮತ್ತು ಮರಗಳ ವ್ಯಾಪ್ತಿಯಲ್ಲಿ 1,446 ಚದರ ಕಿ.ಮೀ. ಏರಿಕೆಯಾಗಿದೆ ಎಂದು ವರದಿ ಹೇಳುತ್ತದೆ. ಇದರಲ್ಲಿ 156 ಚದರ ಕಿ.ಮೀ. (0.2 ಶೇ) ಅರಣ್ಯ ವ್ಯಾಪ್ತಿ ಏರಿಕೆಯಾದರೆ, ಮರಗಳ ವ್ಯಾಪ್ತಿಯಲ್ಲಿ 1,209 ಚದರ ಕಿ.ಮೀ. (1.16 ಶೇ) ಏರಿಕೆಯಾಗಿದೆ. ಆದರೆ, ಪಶ್ಚಿಮಘಟ್ಟ ಹಿಮಾಲಯದ ರಾಜ್ಯಗಳು ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮುಂತಾದ ಪರಿಸರಸೂಕ್ಷ್ಮ ವಲಯಗಳಲ್ಲಿ ಅರಣ್ಯ ವ್ಯಾಪ್ತಿ ಕುಸಿದಿದೆ. ಕಳೆದ ಒಂದು ದಶಕದಲ್ಲಿ ಪಶ್ಚಿಮ ಘಟ್ಟದ ಪರಿಸರಸೂಕ್ಷ್ಮ ಪ್ರದೇಶಗಳು 58.22 ಚದರ ಕಿ.ಮೀ. ಅರಣ್ಯ ವ್ಯಾಪ್ತಿಯನ್ನು ಕಳೆದುಕೊಂಡಿವೆ. ಈಶಾನ್ಯ ವಲಯದಲ್ಲಿ ಇದೇ ಅವಧಿಯಲ್ಲಿ ಪರಿಸರಸೂಕ್ಷ್ಮ ಪ್ರದೇಶಗಳ ಪ್ರಮಾಣ 327 ಚದರ ಕಿ.ಮೀ. ನಷ್ಟು ಕುಸಿದಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ದಾಖಲಿತ ಅರಣ್ಯ ಪ್ರದೇಶದಲ್ಲೂ ಇಳಿಕೆಯಾಗಿದೆ. ಮಹತ್ವದ ನೈಸರ್ಗಿಕ ಅರಣ್ಯ ಮತ್ತು ಪರಿಸರಸೂಕ್ಷ್ಮ ವಲಯಗಳು ಬೆದರಿಕೆಯನ್ನು ಎದುರಿಸುತ್ತಿವೆ ಹಾಗೂ ಬೆಳೆಸಿದ ಕೃತಕ ಅರಣ್ಯ ವ್ಯವಸ್ಥೆಯತ್ತ ದೇಶವು ಸಾಗುತ್ತಿದೆ. ಪ್ಲಾಂಟೇಶನ್‌ಗಳ ಹೆಚ್ಚಳದಿಂದಾಗಿ ಇಂಗಾಲದ ಡೈ ಆಕ್ಸೈಡ್ ಹೀರುವಿಕೆ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ವರದಿ ಹೇಳಿಕೊಳ್ಳುತ್ತದೆ. ಆದರೆ, ಹೆಚ್ಚುತ್ತಿರುವ ಅರಣ್ಯನಾಶದಿಂದಾಗಿ ಬಿಡುಗಡೆಗೊಳ್ಳುವ ಕಾರ್ಬನ್ ಡೈ ಆಕ್ಸೈಡ್ ಬಗ್ಗೆ ವರದಿ ಮೌನವಾಗಿದೆ. 2011ರಿಂದ 2021ರವರೆಗಿನ ದಶಕದ ಅರಣ್ಯನಾಶದ ಬಗ್ಗೆಯೂ ವರದಿ ಮಾಹಿತಿ ನೀಡಿದೆ. ಅರಣ್ಯಗಳನ್ನು ಅತ್ಯಂತ ದಟ್ಟ ಅರಣ್ಯ ಮಧ್ಯಮ ದಟ್ಟ ಅರಣ್ಯ ಮತ್ತು ತೆರೆದ ಅರಣ್ಯ ಎಂಬುದಾಗಿ ವಿಂಗಡಿಸಲಾಗಿದೆ. ಆಘಾತಕಾರಿ ಅಂಶವೆಂದರೆ, 46,707 ಚದರ ಕಿ.ಮೀ. ಅತ್ಯಂತ ದಟ್ಟ ಮಧ್ಯಮ ದಟ್ಟ ಮತ್ತು ತೆರೆದ ಈಗ ಅಸ್ತಿತ್ವದಲ್ಲಿರುವ ಅರಣ್ಯಗಳ ಗುಣಮಟ್ಟದಲ್ಲಿ ಅಗಾಧ ಬದಲಾವಣೆಗಳಾಗಿವೆ ಎಂದು ಹೇಳುವ ತಜ್ಞರು, ನೈಸರ್ಗಿಕ ಅರಣ್ಯಗಳನ್ನು ಕಡಿಯುವಾಗ ಎಷ್ಟು ಇಂಗಾಲದ ಡೈ ಆಕ್ಸೈಡ್ ಬಿಡುಗಡೆಗೊಳ್ಳುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಸರಿಯಾದ ಅಧ್ಯಯನವೊಂದನ್ನು ಮಾಡಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಡುತ್ತಾರೆ. ಇತ್ತೀಚಿನ ಅರಣ್ಯ ಸಮೀಕ್ಷೆಯು ಕೃಷಿ ಅರಣ್ಯಕ್ಕೆಂದೇ ಒಂದು ಅಧ್ಯಾಯವನ್ನು ಮೀಸಲಿಟ್ಟಿದೆ. ಕೃಷಿ ಅರಣ್ಯವೆಂದರೆ ಕೃಷಿ ಭೂಮಿಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮರಗಳು ಮತ್ತು ಪೊದೆಗಳನ್ನು ಬೆಳೆಸುವುದು 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮರಗಳ ವ್ಯಾಪ್ತಿ ಹಿಗ್ಗಿದೆ ಎಂದು ವರದಿ ಹೇಳುತ್ತದೆ. ಅಂದರೆ, ಅದರ ಅರ್ಥ ಈ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೃಷಿ ಅರಣ್ಯವನ್ನು ಅನುಷ್ಠಾನಕ್ಕೆ ತರಲಾಗಿದೆ. 2023ರಲ್ಲಿ ಕೃಷಿ ಅರಣ್ಯದ ಅಡಿಯಲ್ಲಿ ಬರುವ ಮರಗಳ ಒಟ್ಟು ವ್ಯಾಪ್ತಿ 1,27,590 ಚದರ ಕಿ.ಮೀ. ಎಂಬುದಾಗಿ ವರದಿ ತಿಳಿಸುತ್ತದೆ. ಇದರಲ್ಲಿ 5ರಿಂದ 10 ಸೆಂಟಿಮೀಟರ್ ವ್ಯಾಸವಿರುವ ಮರಗಳು ಮತ್ತು ಬಿದಿರುಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. 2013 ಮತ್ತು 2023ರ ನಡುವಿನ ಅವಧಿಯಲ್ಲಿ ಕೃಷಿ ಅರಣ್ಯವು 20.02 ಶೇ. ದಷ್ಟು ಬೆಳೆದಿದೆ. ಅದೇ ವೇಳೆ, ಭಾರತದ ನದಿ ಪ್ರದೇಶಗಳನ್ನು ಕಾಪಾಡುವ ಕಾಂಡ್ಲಾ ಕಾಡು ಅಥವಾ ಮ್ಯಾಂಗ್ರೂವ್ ವ್ಯಾಪ್ತಿ ಕುಗ್ಗುತ್ತಿದೆ ಎಂದು ವರದಿ ಹೇಳಿದೆ. ಜಲಚರಗಳು ಸೇರಿದಂತೆ ನದಿ ತಟದ ರಕ್ಷಣೆಯಲ್ಲಿ ಮಹತ್ತರ ಪಾತ್ರವಹಿಸುವ, ಜೀವವೈವಿಧ್ಯಗಳಿಗೆ ಆಶ್ರಯವಾಗಿರುವ ಮ್ಯಾಂಗ್ರೂವ್ ಇಳಿಕೆಯಾಗುತ್ತಿರುವುದು ಕರಾವಳಿಯ ಪ್ರದೇಶಗಳಿಗೆ ಅಪಾಯಕಾರಿಯಾಗಿದೆ. ಭಾರತದ ಒಟ್ಟು ಮ್ಯಾಂಗ್ರೂವ್ ವ್ಯಾಪ್ತಿ 4,991 ಚದರ ಕಿ.ಮೀ. ಆಗಿದೆ. ಅಂದರೆ ಇದು ದೇಶದ ಭೌಗೋಳಿಕ ವ್ಯಾಪ್ತಿಯ 0.15 ಶೇ. ದಷ್ಟಿದೆ. ಅತ್ಯಂತ ದಟ್ಟ ಮ್ಯಾಂಗೋವ್‌ಗಳ ಪ್ರಮಾಣ 2933 ಶೇ. ಆಗಿದ್ದರೆ, ಮಧ್ಯಮ ದಟ್ಟ ಮ್ಯಾಂಗೋವ್‌ಗಳ ಪ್ರಮಾಣ 30.07 ಶೇ ಆಗಿದೆ. ಅದೇ ವೇಳೆ, ತೆರೆದ ಮ್ಯಾಂಗೋವ್‌ಗಳ ಪ್ರಮಾಣ 40.60 ಶೇ. ಆಗಿದೆ. 2021ರಿಂದ ಮ್ಯಾಂಗ್ರೂವ್‌ಗಳ ಪ್ರಮಾಣ 7.43 ಚದರ ಕಿ.ಮೀ. ನಷ್ಟು ಕಡಿಮೆಯಾಗಿದೆ. ಇದರ ಪ್ರಮಾಣ ಗುಜರಾತ್ ನಲ್ಲಿ 36.39 ಚದರ ಕಿ.ಮೀ. ನಷ್ಟು ಕಡಿಮೆಯಾದರೆ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ 465 ಚದರ ಕಿ.ಮೀ. ನಷ್ಟು ಕುಗ್ಗಿದೆ. ಆದರೆ, ಈ ಅವಧಿಯಲ್ಲಿ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳ ಮ್ಯಾಂಗ್ರೂವ್ ವ್ಯಾಪ್ತಿ ಕ್ರಮವಾಗಿ 13.01 ಚದರ ಕಿ.ಮೀ. ಮತ್ತು 12.39 ಚದರ ಕಿ.ಮೀ. ನಷ್ಟು ಹಿಗ್ಗಿದೆ. ಗುಜರಾತ್ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಮ್ಯಾಂಗೋವ್‌ಗಳ ಪ್ರಮಾಣದಲ್ಲಿ ಇಳಿಕೆಯಾಗಲು ಏನು ಕಾರಣ ಎಂಬ ಬಗ್ಗೆ ಅಧ್ಯಯನ ನಡೆಯಬೇಕಾದ ಅಗತ್ಯವಿದೆ. ಯಾಕೆಂದರೆ ಹವಾಮಾನ ಬದಲಾವಣೆಯ ತೀವ್ರತೆಯನ್ನು ಕಡಿಮೆಗೊಳಿಸಲು ಮತ್ತು ಕರಾವಳಿ ಪರಿಸರ ವ್ಯವಸ್ಥೆಯನ್ನು ರಕ್ಷಿಸಲು ಮ್ಯಾಂಗ್ರೂವ್‌ಗಳು ಅಗತ್ಯವಾಗಿವೆ.

ಅರಣ್ಯಗಳು ಅರಹೇತರ ಪ್ರದೇಶಗಳಾಗಿ ಮಾರ್ಪಟ್ಟಿವೆ. ಅದೇ ವೇಳೆ, 5,573 ಚದರ ಕಿ.ಮೀ ಅರಣ್ಯವು ಪೊದೆಗಳಾಗಿವೆ. ಕಳೆದ ಒಂದು ದಶಕದಲ್ಲಿ 40,709 ಚದರ ಕಿ.ಮೀ. ಅರಣ್ಯವು ದಟ್ಟತೆಯನ್ನು ಕಳೆದುಕೊಂಡಿದೆ. ಈ ಅವಧಿಯಲ್ಲಿ ಅತ್ಯಂತ ದಟ್ಟ ಮತ್ತು ಮಧ್ಯಮ ದಟ್ಟ ಅರಣ್ಯಗಳು ತೆರೆದ ಅರಣ್ಯಗಳಾಗಿವೆ ಎಂದು ವರದಿ ಹೇಳುತ್ತದೆ.

ನೇತಾಜಿ ಶುಭಾಷ್ ಚಂದ್ರ ಬೋಸ್‌ರವರ 128ನೇ ವರ್ಷದ ಜನ್ಮಜಯಂತಿ

1927 ರಲ್ಲಿ ಸುಭಾಷರ ಬಿಡುಗಡೆ

1921 ರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಭಾರತಕ್ಕೆ ಬಂದಿದ್ದಾಗ ಅವರ ಭೇಟಿಯನ್ನು ವಿರೋಧಿಸಿ ಕಲ್ಕತ್ತೆಯಲ್ಲಿ ಭಾರಿ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸುಭಾಷರು ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಬ್ರಿಟಿಷ್ ಸರ್ಕಾರ ಅವರನ್ನು ಬಂಧಿಸಿ ಆರು ವರ್ಷದವರೆಗೆ ಸೆರೆಮನೆ ಶಿಕ್ಷೆ ವಿಧಿಸಿ ಬರ್ಮಾದಲ್ಲಿನ ಮಂಡಾಲ ಜೈಲಿಗೆ ಕಳಿಸಿದ್ದರು. 1927 ರಲ್ಲಿ ಸುಭಾಷರ ಬಿಡುಗಡೆಯಾಯಿತು. 1938 ರಲ್ಲಿ ಸುಭಾಷ್ ಚಂದ್ರ ಬೋಸರು ಭಾರತೀಯ ಕಾಂಗ್ರೇಸ್ಸಿನ ಅಧ್ಯಕ್ಷರಾದರು. ಎರಡನೇ ಬಾರಿಯೂ ಅವರು ಕಾಂಗ್ರೇಸ್ ಪಕ್ಷದ ಅಧ್ಯಕ್ಷರಾದರು. 1939 ಏಪ್ರಿಲ್ ನಲ್ಲಿ ಪಕ್ಷದ ಸಿದ್ಧಾಂತಗಳ ಬಗ್ಗೆ ಗಾಂಧೀಜಿಯವರೊಡನೆ ಭಿನ್ನಾಭಿಪ್ರಾಯಗಳು ಉಂಟಾದಾಗ ಬೋಸರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

• ಉದಯವಾಹಿನಿ, ವಿಶೇಷ

ನೇತಾಜಿ ಸುಭಾಷ್ ಚಂದ್ರ ಬೋಸ್ ರವರು 1897 ಜನವರಿ 23 ರಂದು ಒರಿಸ್ಸಾದ ಕಟಕ್ನಲ್ಲಿ ಜನಿಸಿದರು. ತಂದೆ ಜಾನಕಿನಾಥ ಬೋಸ್, ತಾಯಿ ಪ್ರಭಾವತಿ. ಬೋಸರವರ ಪ್ರಾಥಮಿಕ ವಿದ್ಯಾಭ್ಯಾಸ ಕಟಕ್ನಲ್ಲಿಯೇ ನಡೆಯಿತು. ಆ ಬಳಿಕ ಕಲ್ಕತ್ತೆಗೆ ತೆರಳಿ ಪ್ರೆಸಿಡೆನ್ಸಿ ಕಾಲೇಜು ಸೇರಿದರು. ಆ ಕಾಲೇಜಿನಿಂದ ಎಂ.ಎ. ಪದವಿ ಪಡೆದ ಮೇಲೆ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಪ್ರವೇಶ ಪಡೆಯಲು ಇಂಗ್ಲೆಂಡಿಗೆ ಹೊರಟರು.

ಪ್ರತಿಭಾವಂತರಾಗಿದ್ದ ಬೋಸ್ ಅವರು ಐಸಿಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಆಯ್ಕೆಯಾದರು. ಆದರೆ ಸರ್ಕಾರಕ್ಕೆ ಸೇವೆ ಸಲ್ಲಿಸ ಬಾರದೆಂದು ನಿರ್ಧರಿಸಿದ ಅವರು ಐಸಿಎಸ್ ಹುದ್ದೆಯನ್ನು ತ್ಯಜಿಸಿ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ತಂದು ಕೊಡುತ್ತೇನೆ ಎಂದು ಘೋಷಿಸಿದರು. ಇವರು ಮಹಾನ್ ದೇಶಭಕ್ತರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು ಸ್ವಾಮಿ ವಿವೇಕಾನಂದರು ಮತ್ತು ಅರವಿಂದ್ ಘೋಷ್ ರಿಂದ ಪ್ರೇರಣೆ ಪಡೆದಿದ್ದರು. ರಾಜಕೀಯದಲ್ಲಿ ದೇಶಬಂಧು ಚಿತ್ತರಂಜನ ದಾಸರು ಅವರಿಗೆ ಮಾರ್ಗದರ್ಶಕರಾಗಿದ್ದರು. ವಿಶ್ವಕವಿ ರವೀಂದ್ರನಾಥ ಟಾಗೋರ್ ಅವರು ಸುಭಾಷ್ ಚಂದ್ರ ಬೋಸ್ ಅವರ ನಿಲುವನ್ನು ಬೆಂಬಲಿಸಿದರಲ್ಲದೆ, ಅವರನ್ನು ಪ್ರಶಂಸಿಸಿ ಅವರ ನಾಯಕತ್ವದಲ್ಲಿ ತಾವು ಪೂರ್ಣ ಭರವಸೆ ಹೊಂದಿರುವುದಾಗಿ ತಿಳಿಸಿದರು. 1939 ರಲ್ಲಿ ಬೋಸರು ಕಾಂಗ್ರೇಸ್ ಪಕ್ಷದಲ್ಲಿಯೇ ಫಾರ್ವರ್ಡ್ ಬ್ಲಾಕ್ ಕಟ್ಟಿದರು. ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ವಿರುದ್ಧ ಪೂರ್ಣ ಸ್ವರೂಪದ ಆಂದೋಲನವನ್ನು ಅವರು ಪ್ರಾರಂಭಿಸಿದರು.

1940 ರಲ್ಲಿ ಸರ್ಕಾರ ಅವರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿತು. ಅವರಿಗೆ ನೀಡಿದ ಶಿಕ್ಷೆ ನ್ಯಾಯಬದ್ಧವಾಗಿ ಇರಲಿಲ್ಲ. ಸೆರೆಮನೆಯಲ್ಲಿ ಅವರ ಆರೋಗ್ಯ ಹದಗೆಟ್ಟಿತು. ಸರ್ಕಾರ ಅವರನ್ನು ಬಿಡುಗಡೆ ಗೊಳಿಸಿದರೂ ಗೃಹಬಂಧನದಲ್ಲಿರಿಸಿತು. ಇದೇ ವೇಳೆಯಲ್ಲಿ ಬೋಸರು ಪಠಾಣರ ವೇಷತೊಟ್ಟು ಕಾಬೂಲಿನ ಮೂಲಕವಾಗಿ ರಷ್ಯಾಕ್ಕೆ ಹೋದರು. ಅಲ್ಲಿಂದ ಅವರು ಜರ್ಮನಿ ದೇಶದ ಬರ್ಲಿನ್‌ಗೆ ಹೋಗಿ ಅಲ್ಲಿ ಹಿಟ್ಲರ್ ಅವರನ್ನು ಭೇಟಿ ಮಾಡಿದರು. ಬ್ರಿಟಿಷರಿಂದ ಭಾರತವನ್ನು ಮುಕ್ತಗೊಳಿಸಲು ನೆರವು ನೀಡುವುದಾಗಿ ಹಿಟ್ಲರ್ ಬೋಸರಿಗೆ ಭರವಸೆ ನೀಡಿದರು. ಬೋಸರು ಜರ್ಮನಿಯಲ್ಲಿ ಆಜಾದ್ ಹಿಂದ್ ಸೇನೆಯನ್ನು ಕಟ್ಟಿದರು. ಭಾರತೀಯ ಯುದ್ಧಕೈದಿಗಳನ್ನು ಸೇನಾಪಡೆಗೆ ಸೇರಿಸಿಕೊಳ್ಳಲಾಯಿತು. ಸುಭಾಷ್ ಚಂದ್ರ ಬೋಸರು ಜಪಾನ್ಗೆ ತೆರಳಿ ಅಲ್ಲಿನ ಪ್ರಧಾನ ಮಂತ್ರಿಗಳಾಗಿದ್ದ ಟೋಜೋ ಅವರನ್ನು ಭೇಟಿ ಮಾಡಿ ಭಾರತದ ಬಿಡುಗಡೆಗೆ ನೆರವು ಕೇಳಿದರು. ಟೋಜೋ ಅವರು ಬೋಸರ ವಿಶಿಷ್ಟ ವ್ಯಕ್ತಿತ್ವ, ಧೈರ್ಯ, ದೇಶಪ್ರೇಮವನ್ನು ಕಂಡು ಮೆಚ್ಚಿ ಬೋಸರಿಗೆ ಎಲ್ಲಾ ರೀತಿಯ ನೆರವು ನೀಡುವುದಾಗಿ ಆಶ್ವಾಸನೆ ನೀಡಿದರು. 1943 ಅಕ್ಟೋಬರ್ ನಲ್ಲಿ ಬೋಸರು ಸಿಂಗಪುರದಲ್ಲಿ ಆಜಾದ್ ಹಿಂದ್ ಸೇನೆಯ ನಾಯಕತ್ವವನ್ನು ವಹಿಸಿಕೊಂಡರು. ಅಲ್ಲಿಯೇ ಸ್ವತಂತ್ರ ಭಾರತದ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಿದರು. ಸುಭಾಷರು ತಮ್ಮ ಸೇನಾಪಡೆಯೊಂದಿಗೆ ಬರ್ಮಾ ಮುಖಾಂತರವಾಗಿ ಭಾರತದತ್ತ ಹೊರಟರು.

ಇಂಡೋ ಜಪಾನಿ ಸೈನಿಕರ ನೆರವಿನಿಂದ ಅಂಡಮಾನ್-ನಿಕೋಬರ್ ದ್ವೀಪಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡರು. 1943 ರಲ್ಲಿ ಅಸಾಧಾರಣ ಶೌರ್ಯ ಪರಾಕ್ರಮಗಳ ಪ್ರದರ್ಶನದಿಂದ ಆಜಾದ್ ಹಿಂದ್ ಸೇನಾಪಡೆ ಬರ್ಮಾವನ್ನು ವಶಪಡಿಸಿಕೊಂಡಿತು.

1945 ರಲ್ಲಿ ಅಮೇರಿಕ ದೇಶ ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಪಟ್ಟಣಗಳ ಮೇಲೆ ಅಣುಬಾಂಬ್ ದಾಳಿ ನಡೆಸಿತು. ಲಕ್ಷಾಂತರ ಜನರು ಸತ್ತರು. 1945 ಆಗಸ್ಟ್ 14 ರಂದು ಜಪಾನ್ ದೇಶ ಯಾವ ನಿಬಂಧನೆಗಳಿಲ್ಲದೇ ಬ್ರಿಟನ್ ನೇತೃತ್ವದ ಒಕ್ಕೂಟಕ್ಕೆ ಶರಣಾಯಿತು. ವಿಧಿಯಿಲ್ಲದೇ ಬೋಸರು ಯುದ್ಧವನ್ನು ನಿಲ್ಲಿಸಬೇಕಾಯಿತು. ಬೋಸರು 1945 ಆಗಸ್ಟ್ 17 ರಂದು ಸಿಂಗಪುರದಿಂದ ಟೋಕಿಯೋಗೆ ಹೊರಟರು. ಅವರು ಪ್ರಯಾಣಿಸಿದ ವಿಮಾನ ಬಾಂಬರ್ ವಿಮಾನ ವಾಗಿದ್ದು, ಕರ್ನಲ್ ರಹಮಾನ್ ಅವರೊಂದಿಗೆ ಹೊರಟರು. ಬೋಸರು ಪ್ರಯಾಣಿಸುತ್ತಿದ್ದ ವಿಮಾನ ಅಪಘಾತಕ್ಕೀಡಾಗಿ ಬೋಸರು ಮರಣಿಸಿದ ರೆಂಬ ಧಾರಣ ವಾರ್ತೆಯನ್ನು ಟೋಕಿಯೋ ಆಕಾಶವಾಣಿ ಪ್ರಸಾರ ಮಾಡಿತು. ಇಂತಹ ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರ, ದೇಶದ ಸ್ವಾತಂತ್ರ್ಯಕ್ಕಾಗಿ ದಿಟ್ಟತನದಿಂದ ಹೋರಾಡಿದ, ರಾಷ್ಟ್ರಭಕ್ತ ಹಾಗೂ ಯುವಕರಿಗೆ ಚೈತನ್ಯ ಸ್ಫೂರ್ತಿಯಾಗಿದ್ದ ಸುಭಾಷ್ ಚಂದ್ರ ಬೋಸರು ಹುತಾತ್ಮರಾಗಿ ಅಮರರಾದರು. ಇವರ ಮರಣ ಇನ್ನೂ ನಿಗೂಢವಾಗಿದೆ. ರಾಷ್ಟ್ರದ ಕೆಲವು ನಾಗರೀಕರು ಅವರ ಸಾವಿನ ನಿಖರ ಸ್ಪಷ್ಟತೆಯನ್ನು ತಿಳಿಯಲು ಬಯಸುತ್ತಿದ್ದಾರೆ. 1992 ರಲ್ಲಿ ಭಾರತ ಸರ್ಕಾರ ಸುಭಾಷ್ಚಂದ್ರ ಬೋಸ್ ರವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಆದರೆ ಅವರ ಕುಟುಂಬದವರು ಪ್ರಶಸ್ತಿಯನ್ನು ನಿರಾಕರಿಸಿದರು. ಇಂತಹ ಮಹಾನ್ ರಾಷ್ಟ್ರದ ಸೂರ್ಯ, ಸ್ವಾತಂತ್ರ್ಯ ಹೋರಾಟಗಾರ, ಯುವ ಚೈತನ್ಯ ಪುರುಷ, ಯುವ ಸ್ಫೂರ್ತಿ ಸುಭಾಷ್ ಚಂದ್ರ ಬೋಸ್ ರವರನ್ನು ಸ್ಮರಿಸಿ, ನೆನೆದು ಇಂದು ಅವರ 128 ನೇ ವರ್ಷದ ಜನ್ಮ ಜಯಂತಿಯನ್ನು ನಾಡಿನಾದ್ಯಂತ ಆಚರಿಸುವುದು ಭಾರತೀಯರಾದ ನಮ್ಮೆಲ್ಲರ ಆದ್ಯ ಕರ್ತವ್ಯ, ಹೊಣೆಗಾರಿಕೆ, ಜವಾಬ್ದಾರಿ. ಇಲ್ಲಿಗೆ ಅವರು ಕಣ್ಮರೆಯಾಗಿ 79 ವರ್ಷವಾಯಿತು. ಇಂತಹ ದೇಶಭಕ್ತ ಚೈತನ್ಯ ಪುರುಷರಂತವರಿಗೆ ಭಾರತಾಂಬೆ ಜನ್ಮ ನೀಡಲಿ ಎಂದು ಆಶಿಸೋಣ.

ಸತ್ಯಂ ಶಿವಂ ಸುಂದರಂ

ಸಾಮಾಜಿಕ ಕಳಕಳಿ
ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ, ಶಿಕ್ಷಕಿ, ಸಾಮಾಜಿಕ ಚಿಂತಕಿ. ಹಾಸನ

ದಿನಕ್ಕೊಂದು ಮುಕ್ತಕ -74

• ಉದಯವಾಹಿನಿ, ವಿಶೇಷ

ದುಃಖದಲಿ ಬಳಲಿದನು ರಘುರಾಮ ಕಾಡಿನಲಿ
ದುಃಖದಲಿ ಮುಳುಗಿದರು ಬದುಕಿ ತೋರಿ
ದುಃಖವೇ ಎಂದಿರದು ಜೀವನದಿ ಮುನ್ನಡೆಯೆ
ದುಃಖ ದೂರಾಗುವುದು ಲಕ್ಷ್ಮಿ ದೇವಿ

ಭಾವಾರ್ಥ : ಕಾಡಿನಲ್ಲಿ ದುಃಖವನ್ನು ಅನುಭವಿಸಿದ ರಘುರಾಮರು. ದುಃಖವೇ ಇದೆಯೆಂದು ದುಃಖದಲ್ಲೇ ಕೂರಲಿಲ್ಲ ಎಷ್ಟೇ ದುಃಖವಿದ್ದರೂ ಸಹ ಜೀವನದ ಬದುಕ

ಪಡೆದ 'ಜ್ಞಾನ' ಸಮಾಜ ಮತ್ತು ದೇಶದ ಅಭಿವೃದ್ಧಿಗೆ ಮುಡಿಪಾಗಿರಲಿ

● ಘಟಿಕೋತ್ಸವ ಸಮಾರಂಭವು ವಿದ್ಯಾರ್ಥಿಗಳ ಜೀವನದ ಅತ್ಯಮೂಲ್ಯ ಕ್ಷಣಗಳಲ್ಲಿ ಒಂದಾಗಿದೆ: ಥಾವರ್‌ಚಂದ್ ಗೆಹ್ಲೋಟ್

• ಉದಯವಾಹಿನಿ ಶಿವಮೊಗ್ಗ

ವಿದ್ಯಾರ್ಥಿಗಳು ಗಳಿಸಿದ ಜ್ಞಾನವನ್ನು ತಮ್ಮ ವೈಯಕ್ತಿಕ ಬೆಳವಣಿಗೆಗೆ ಮಾತ್ರವಲ್ಲದೆ, ಸಮಾಜ, ದೇಶ ಮತ್ತು ಪರಿಸರದ ಒಳಿತಿಗಾಗಿ ಬಳಸಿಕೊಳ್ಳಬೇಕು ಎಂದು ಕರ್ನಾಟಕದ ಗೌರವಾನಿತ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಕರೆ ನೀಡಿದರು.

ಪ್ರತಿ ಸವಾಲು ಅವಕಾಶವನ್ನು ತರುತ್ತದೆ

ಕುವೆಂಪು ವಿಶ್ವವಿದ್ಯಾಲಯದ 34ನೇ ಘಟಿಕೋತ್ಸವದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಘಟಿಕೋತ್ಸವ ಸಮಾರಂಭವು ವಿದ್ಯಾರ್ಥಿಗಳ ಜೀವನದ ಅತ್ಯಮೂಲ್ಯ ಕ್ಷಣಗಳಲ್ಲಿ ಒಂದಾಗಿದೆ. ಇದು ಕಠಿಣ ಪರಿಶ್ರಮ ಮತ್ತು ಸಮರ್ಪಣೆಯ ಆಚರಣೆ ಮಾತ್ರವಲ್ಲ ಇದು ನಿಮ್ಮ ಕನಸುಗಳ ಹಾರಾಟದ ಆರಂಭವಾಗಿದೆ.

ಈ ಘಟಿಕೋತ್ಸವವು ಶಿಕ್ಷಣದ ಹಾದಿಯಿಂದ ಅನುಭವ ಮತ್ತು ಕ್ರಿಯೆಯ ಹಾದಿಗೆ ಹೆಜ್ಜೆ ಹಾಕಲಿದ್ದೀರಿ ಎಂಬ ಸಂದೇಶವನ್ನು ನೀಡುತ್ತದೆ ಎಂದು ಹೇಳಿದರು.

ಆತ್ಮೀಯ ವಿದ್ಯಾರ್ಥಿಗಳೇ, ಸವಾಲುಗಳಿಂದ ಕೂಡಿದ ಜಗತ್ತು ನಿಮ್ಮ ಮುಂದೆ ಇದೆ. ನೆನಪಿಡಿ, ಪ್ರತಿ ಸವಾಲು ಅವಕಾಶವನ್ನು ತರುತ್ತದೆ. ಶಿಕ್ಷಣವು ಕೇವಲ ವೃತ್ತಿಯನ್ನು ಮಾಡುವ ಸಾಧನವಲ್ಲ, ಆದರೆ ಮಾನವೀಯತೆಯ ಉನ್ನತಿಗೆ ನಿಮ್ಮ ಕೊಡುಗೆಯನ್ನು ಖಚಿತಪಡಿಸಿಕೊಳ್ಳಲು ಇದು ಒಂದು ಸಾಧನವಾಗಿದೆ ತಿಳಿಸಿದರು.

ನಿಮ್ಮ ಕಾರ್ಯಗಳು ಮತ್ತು ಪ್ರಯತ್ನಗಳ ಮೂಲಕ ಜಗತ್ತನ್ನು ಉತ್ತಮ ಸ್ಥಳವನ್ನಾಗಿ ಮಾಡಲು ನಿರ್ಧರಿಸಿ, ಇನ್ನು ಮೂರನೆದು ಕಲಿಕೆಯನ್ನು ಮುಂದುವರಿಸಿ ಶಿಕ್ಷಣವು ಎಂದಿಗೂ ಕೊನೆಗೊಳ್ಳುವುದಿಲ್ಲ, ಅದು ಜೀವನದ ಪ್ರತಿಯೊಂದು ಹಂತದಲ್ಲೂ ನಿಮಗೆ ಮಾರ್ಗದರ್ಶನ ನೀಡುತ್ತಲೇ ಇರುತ್ತದೆ ಎಂದು ರಾಜ್ಯಪಾಲರು ಸಲಹೆ ನೀಡಿದರು.

ತಂತ್ರಜ್ಞಾನ, ನಾವೀನ್ಯತೆ ಮತ್ತು ಸುಸ್ಥಿರತೆಯ ಯುಗದಲ್ಲಿ ಜೀವಿಸುತ್ತಿರುವ ಯುವ ಪೀಳಿಗೆ ಕೊಡುಗೆಯು ಮಾನವಕುಲಕ್ಕೆ ಹೊಸ ದಿಕ್ಕನ್ನು ನೀಡುತ್ತದೆ.

ಉದಯವಾಹಿನಿ ಚಿತ್ರ

ಶೈಕ್ಷಣಿಕದ ಯಶಸ್ಸು ಪ್ರಯಾಣದ ಪ್ರಾರಂಭವಾಗಿದೆ. ನಿಮ್ಮ ಕೆಲಸದಿಂದ ಸಮಾಜವು ಹೆಮ್ಮೆಪಡುವಂತೆ ಮಾಡಿ ಮತ್ತು ಈ ಹಂತಕ್ಕೆ ನಿಮಗೆ ಮಾರ್ಗದರ್ಶನ ಮಾಡಿದ ನಿಮ್ಮ ಪೋಷಕರು, ಶಿಕ್ಷಕರು ಮತ್ತು ಈ ವಿಶ್ವವಿದ್ಯಾಲಯಕ್ಕೆ ಯಾವಾಗಲೂ ಕೃತಜ್ಞರಾಗಿರಿ ಎಂದು ಹೇಳಿದರು.

ಕುವೆಂಪು ವಿಶ್ವವಿದ್ಯಾಲಯವು ನಮ್ಮ ರಾಜ್ಯದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಕನ್ನಡದ ಶ್ರೇಷ್ಠ ಬರಹಗಾರ ಮತ್ತು ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಶ್ರೀ ಕುವೆಂಪು ಅವರ ಹೆಸರನ್ನು ಇಡಲಾಗಿದೆ.

ಸೇವೆ ನಿರಂತರವಾಗಿರಲಿ

ಘಟಿಕೋತ್ಸವದಲ್ಲಿ ಸಮಾಜ ಕಲ್ಯಾಣ, ಸಾರ್ವಜನಿಕ ಹಿತಾಸಕ್ತಿ ಮತ್ತು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಶ್ರಮಿಸಿದ ಪ್ರೊಫೆಸರ್ ಸಿ.ಎಸ್.ಉನ್ನಿಕೃಷ್ಣನ್, ಶ್ರೀ ಡಿ.ನಾಗರಾಜ್, ಮತ್ತು ಶ್ರೀ ಕಾಗೋಡು ತಿಮ್ಮಪ್ಪ ಅವರಿಗೆ ಗೌರವ ಪದವಿ ನೀಡಿ ಗೌರವಿಸಿರುವುದು ಸಂತಸದ ವಿಷಯ ಅವರಿಗೆ ಅಭಿನಂದನೆ ಸಲ್ಲಿಸುತ್ತ, ಸಮಾಜಕ್ಕಾಗಿ ಅವರ ಸೇವೆ ನಿರಂತರವಾಗಿರಲಿ ಎಂದು ಮನವಿ ಮಾಡಿದರು.

ವಿದ್ಯಾರ್ಥಿಗಳೇ, ಮೊದಲನೇದಾಗಿ ಕನಸು ಮತ್ತು ಅವುಗಳನ್ನು ನನಸಾಗಿಸಲು ಧೈರ್ಯ ಮಾಡಿ. ದೊಡ್ಡ ಗುರಿಗಳನ್ನು ಹೊಂದಿಸಿ ಮತ್ತು ನಿಮ್ಮ ಕಠಿಣ ಪರಿಶ್ರಮ ಮತ್ತು ಸಮರ್ಪಣೆಯ ಮೂಲಕ ಅವುಗಳನ್ನು ಸಾಧಿಸಿ. ಎರಡನೇದು ಪ್ರಕೃತಿ ಮತ್ತು ಸಮಾಜದ ಕಡೆಗೆ ಸಂವೇದನಾಶೀಲರಾಗಿರಿ.

ಈ ವಿಶ್ವವಿದ್ಯಾಲಯವು ಜ್ಞಾನದ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದ್ದು, ಅಭಿವೃದ್ಧಿ ಹೊಂದಿದ ಭಾರತಕ್ಕೆ ಮಾನವ ಸಂಪನ್ಮೂಲವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ ಎಂದು ಶ್ಲಾಘಿಸಿದರು.

ಘಟಿಕೋತ್ಸವದಲ್ಲಿ ಹೈದ್ರಾಬಾದ್ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ರಾಮ್ ರಾಮಸ್ವಾಮಿ, ಕುಲಪತಿ ಶರತ್ ಅನಂತಮೂರ್ತಿ ಮತ್ತು ಮುಂತಾದ ಗಣ್ಯರು ಉಪಸ್ಥಿತರಿದ್ದರು.

ಉದಯವಾಹಿನಿ ಪತ್ರಿಕೆಯ ವರದಿಗೆ ಸ್ಪಂದಿಸಿದ ಅಧಿಕಾರಿಗಳು

ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿಂಚೋಳಿ

ತಾಲ್ಲೂಕಿನ ಗಾರಂಪಳ್ಳಿ ಗ್ರಾಮಕ್ಕೆ ತೆರಳುವ ಮಾರ್ಗಮಧ್ಯೆ ವಿರುವ ಸೇತುವೆ ಕುಸಿದು ಬೀಳುವ ಸ್ಥಿತಿಯಲ್ಲಿರುವ ಸೇತುವೆ ಶೀಘ್ರದಲ್ಲೇ ನೂತನ ಸೇತುವೆ ಕೆಲಸ ಪ್ರಾರಂಭಿಸುವಂತೆ ಶೀರ್ಷಿಕೆಯಡಿಯಲ್ಲಿ ಜ.21ಮಂಗಳವಾರ **ಉದಯವಾಹಿನಿ** ಪತ್ರಿಕೆಯಲ್ಲಿ ಸುದ್ದಿ ಬಿತ್ತರಿಸಲಾಯಿತು, ಸುದ್ದಿಗೆ ಎಚ್ಚೆತ್ತುಕೊಂಡ ಸಂಬಂಧಪಟ್ಟ ಅಧಿಕಾರಿಗಳು ಜೆಇಗಳು ಗಾರಂಪಳ್ಳಿ ಗ್ರಾಮದ ಸೇತುವೆಗೆ ತೆರಳಿ ಪರಿಶೀಲಿಸಿದ ನಂತರ **ಉದಯವಾಹಿನಿ** ಪತ್ರಿಕೆಯಲ್ಲಿ ಬಿತ್ತರಿಸಿದ ಸುದ್ದಿ ಅರಿತು ಸೇತುವೆ ಪರಿಶೀಲಿಸಲು ಬಂದಿದ್ದೇವೆ ವರದಿ ಸಿದ್ದಪಡಿಸಿ ಮೇಲಾಧೀಕಾರಿಗಳಿಗೆ ಸರ್ಕಾರಕ್ಕೆ ರವಾನಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ ಎಂದು ಗ್ರಾಮಸ್ಥ ಯುವ ಹೋರಾಟಗಾರ ಗೋಪಾಲ ಪೂಜಾರಿ ಗಾರಂಪಳ್ಳಿ ತಿಳಿಸಿದ್ದಾರೆ.

ತಾಲ್ಲೂಕಿನ ಗಾರಂಪಳ್ಳಿ ಸೇತುವೆಯು ಸಂಪೂರ್ಣವಾಗಿ ಕೆಳಹಂತದ ಕಟ್ಟಡ ಭೂಮಿಯಲ್ಲಿ ಕುಸಿದು ಬೀಳುವ ಸ್ಥಿತಿಯಲ್ಲಿದ್ದು ಶೀಘ್ರದಲ್ಲೇ ಅಧಿಕಾರಿಗಳು ಜನಪ್ರತಿನಿಧಿಗಳು ಸೇತುವೆಯ ಎತ್ತರ ಹೆಚ್ಚಿಸಿ ಸೇತುವೆ ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕು ಎಂಬುವುದೆ ಗ್ರಾಮಸ್ಥರ ಅಭಿಪ್ರಾಯವಾಗಿದೆ.

ಸೇತುವೆ ಎತ್ತರ ಹೆಚ್ಚಿಸಲು ಶೀಘ್ರದಲ್ಲೇ ಕೆಲಸ ಪ್ರಾರಂಭಿಸಿ: ಗೋಪಾಲ ಪೂಜಾರಿ
ಗಾರಂಪಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಮಧ್ಯೆ ಇರುವ ಸೇತುವೆಯು ಸಂಪೂರ್ಣವಾಗಿ ಭೂಮಿಯಲ್ಲಿ ಕುಸಿದು ಬೀಳುವ ಸ್ಥಿತಿ
ಸಾರ್ವಜನಿಕರಿಗೆ ಬಹಳಷ್ಟು ತೊಂದರೆ
ಉದಯವಾಹಿನಿ IMPACT ಫಲಶ್ರುತಿ IMPACT

ಉದಯವಾಹಿನಿ ಪತ್ರಿಕೆಯಲ್ಲಿ ಗಾರಂಪಳ್ಳಿ ಸೇತುವೆ ಬಗ್ಗೆ ಸ್ವವಿಸ್ತಾರವಾಗಿ ಸುದ್ದಿ ಬರೆದ 24ಗಂಟೆಯಲ್ಲಿಯೇ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮದ ಸೇತುವೆಗೆ ಆಗಮಿಸಿ ಸೇತುವೆ ಪರಿಶೀಲಿಸಿ ವರದಿ ಸಿದ್ದಪಡಿಸಿ ಮೇಲಾಧೀಕಾರಿಗಳಿಗೆ ಮತ್ತು ಸರ್ಕಾರಕ್ಕೆ ವರದಿ ರವಾನಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದು ಸಂತೋಷವಾಯಿತು. ಉದಯವಾಹಿನಿ ಪತ್ರಿಕೆಯು ನಿದ್ದೆಯಲ್ಲಿದ ಅಧಿಕಾರಿಗಳಿಗೆ ಸರ್ಕಾರಕ್ಕೆ ಚಾಟಿಬಿಸಿ ಏಚ್ಚೇತುಕೊಳ್ಳುವಂತೆ ಮಾಡಿ ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡುತ್ತಿದೆ ಪತ್ರಿಕೆಯ ವರದಿಗಾರರಿಗೆ ಮತ್ತು ಪತ್ರಿಕಾ ಬಳಗಕ್ಕೂ ಗ್ರಾಮಸ್ಥರಿಂದ ಅಭಿನಂದನೆಗಳು ಸಲ್ಲಿಸುತ್ತೇವೆ ಉದಯವಾಹಿನಿ ಪತ್ರಿಕೆ ಇನ್ನು ಎತ್ತರಮಟ್ಟಕ್ಕೆ ಬೆಳೆಯಲಿವೆಂದು ಶುಭಹಾರೈಸುತ್ತೇನೆ. – ಗೋಪಾಲ ಪೂಜಾರಿ, ಯುವ ಹೋರಾಟಗಾರ ಚಿಂಚೋಳಿ

ಗಾರಂಪಳ್ಳಿ ಕೆಳಹಂತದ ಸೇತುವೆ ಮೇಲ್ದರ್ಜೆಗೆ ಏರಿಸಿ ಗ್ರಾಮಸ್ಥರಿಗೆ ಮಳೆಗಾಲದಲ್ಲಿ ಆಗುವ ತೊಂದರೆ ಕಷ್ಟವನ್ನು ನಿವಾರಿಸಲು ನೂತನ ಸೇತುವೆ ನಿರ್ಮಿಸಿ ಅನುಕೂಲ ಕಲ್ಪಿಸಿಕೊಡಬೇಕು. ಇಲ್ಲಾದಿದ್ದರೆ ಕಲಬುರ್ಗಿ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಬೀದರ ಸಂಸದ ಸಾಗರ್ ಖಂಡ್ರೆ ಮತ್ತು ಸ್ಥಳೀಯ ಶಾಸಕ ಡಾ.ಅವಿನಾಶ ಜಾಧವರವರ ಮನೆಯ ಮುಂದೆ ಕುಳಿತು ಧರಣಿ ಸತ್ಯಾಗ್ರಹ ನಡೆಸುತ್ತೇವೆ ಎಂದು ಯುವ ಹೋರಾಟಗಾರ ಗೋಪಾಲ ಗಾರಂಪಳ್ಳಿ ತಿಳಿಸಿದ್ದಾರೆ.

ಸುಭಾಷ್ ಗುತ್ತೇದಾರ,ಶಂಕರ ಕುಲಕರ್ಣಿ,ಮೌನೇಶ ಮುಸ್ತಾರಿ,ಮುರಳಿರಾವ,ಈಶ್ವರ ಮಾಳಗಿ,ಅಶೋಕ್ ಮಾಳಗಿ ಇದ್ದರು.

ಬಾಣಂತಿಯರ ಸಾವು ಪ್ರಕರಣಗಳ ನಿಯಂತ್ರಣಕ್ಕೆ ಅಭಿಯಾನ: ಸಚಿವ ದಿನೇಶ್ ಗುಂಡೂರಾವ್

• ಉದಯವಾಹಿನಿ, ಮಾನ್ಸಿ

ರಾಜ್ಯದಲ್ಲಿ ಸಾವು ಪ್ರಕರಣಗಳ ನಿಯಂತ್ರಣಕ್ಕಾಗಿ ಆರೋಗ್ಯ ಇಲಾಖೆಯ ವತಿಯಿಂದ ಅಭಿಯಾನ ಹಮ್ಮಿಕೊಳ್ಳಲಾಗುವುದು' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ ಸುದ್ದಿಗಾರರ ಜತೆಗೆ ಮಾತನಾಡಿದರು. ಪ್ರಸ್ತುತ ಬಾಣಂತಿಯರ ಸಾವಿನ ಪ್ರಮಾಣ 1ಲಕ್ಷಕ್ಕೆ 60 ಇದೆ. ಈ ಪ್ರಮಾಣವನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ಬಾಣಂತಿಯರ ಆರೋಗ್ಯ ತಪಾಸಣೆ, ಚಿಕಿತ್ಸೆ ಮತ್ತು ಜಾಗೃತಿ ಅಭಿಯಾನ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ' ಎಂದರು.

ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳು ಸೇರಿದಂತೆ ಎಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಖಾಲಿ ಇರುವ ಮುಖ್ಯ ವೈದ್ಯಾಧಿಕಾರಿ, ತಜ್ಞರು ಹಾಗೂ ಶುಶ್ರೂಷಕ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಸ್ಥಳೀಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆ ವಿಭಾಗ, ಶಸ್ತ್ರಚಿಕಿತ್ಸೆ ವಿಭಾಗ ಮತ್ತಿತರ ಸೌಲಭ್ಯಗಳು ಮತ್ತು ಖಾಲಿ ಹುದ್ದೆಗಳ ಬಗ್ಗೆ ಅವರು ಮಾಹಿತಿ ಪಡೆದರು. ಆಸ್ಪತ್ರೆಯಲ್ಲಿ ದಾಖಲಾಗಿರುವ ಬಾಣಂತಿಯರ ಆರೋಗ್ಯ ವನ್ನು ಅವರು ವಿಚಾರಿಸಿದರು. ಸಚಿವ ಎನ್.ಎಸ್.ಬೋಸರಾಜು, ಶಾಸಕ ಜಿ.ಹಂಪಯ್ಯ ನಾಯಕ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಆಯುಷ್ ಅಧಿಕಾರಿ ಡಾ. ಶಂಕರಗೌಡ ಎಸ್ ಪಾಟೀಲ, ಆರೋಗ್ಯಾಧಿಕಾರಿ ಡಾ.ಶರಣಬಸವರಾಜ ಗೌಡ ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವುದು ನಮ್ಮ ಧ್ಯೆಯ' ಎಂದು ಅವರು ಹೇಳಿದರು.' ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರು, ಅಭಿವೃದ್ಧಿ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ 900ಕೋಟಿ ಬಿಡುಗಡೆ ಮಾಡಿದೆ

–ದಿನೇಶ್ ಗುಂಡೂರಾವ್

ವಿದ್ಯಾರ್ಥಿಗಳಿಗೆ ಭವಿಷ್ಯದ ದೊಡ್ಡ ಕನಸು ಇರಲಿ

• ಉದಯವಾಹಿನಿ ಸಕಲೇಶಪುರ

ವಿದ್ಯಾರ್ಥಿಗಳ ಮುಂದೆ ಭವಿಷ್ಯದ ದೊಡ್ಡ ಕನಸು ಇರಬೇಕು, ಆ ಕನಸು ನನಸು ಮಾಡಲು ನಿರಂತರ ಪರಿಶ್ರಮ ಮೈಗೂಡಿಸಿಕೊಳ್ಳಬೇಕು' ಎಂದು ಇಲ್ಲಿಯ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್. ಧನಲಕ್ಷ್ಮಿ ಹೇಳಿದರು. ಇಲ್ಲಿಯ ರೋಟರಿ ಸಮುದಾಯ ಭವನದಲ್ಲಿ ರೋಟರಿ ಸಂಸ್ಥೆ, ಇಂಟರಾಕ್ಟ್ ಕ್ಲಬ್, ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘ ಇವರ ಆಶ್ರಯದಲ್ಲಿ ಮಂಗಳವಾರ ನಡೆದ ಉಚಿತ ಕಾನೂನು ಮಾಹಿತಿ ಶಿಬಿರದಲ್ಲಿ ಮಾತನಾಡಿದರು .

ಪ್ರೌಢಾವಸ್ಥೆಗೆ ಬಂದಾಗ ಸಹಜವಾಗಿ ಹೆಣ್ಣು ಮಕ್ಕಳಾಗಲಿ, ಗಂಡು ಮಕ್ಕಳಾಗಲಿ, ಕೆಲವು ಸ್ನೇಹಿತರು, ವಾಸ ಮಾಡುವ ಸುತ್ತಮುತ್ತಲ ವಾತಾವರಣ, ವಯಸ್ಸಿನಲ್ಲಿ ಆಗುವ ಕೆಲವು ಬದಲಾವಣೆಗಳಿಂದ ದಾರಿ ತಪ್ಪುವ ಸಾಧ್ಯತೆಗಳು ಇರುತ್ತವೆ.

ಅಂತಹ ಸಂದರ್ಭಗಳಲ್ಲಿ ತಮ್ಮ ಮನಸ್ಸಿನ ಸ್ಥಿರತೆಯನ್ನು ಕಳೆದುಕೊಳ್ಳಬಾರದು. ನಿಮ್ಮಗಳ ಮುಂದೆ ಸಾಧನೆಯ ದೊಡ್ಡ ಗುರಿ ಮಾತ್ರವೇ ಕಾಣುತ್ತಿರಬೇಕು' ಎಂದು ಕಿವಿಮಾತು ಹೇಳಿದರು. ಹೆಣ್ಣು ಮಕ್ಕಳನ್ನು ಗೌರವದಿಂದ ಕಾಣಬೇಕು, ಒಂಟಿ ಹೆಣ್ಣು ಮಕ್ಕಳಿಗೆ ಗಂಡು ಸದಾ ರಕ್ಷಣೆ ನೀಡಬೇಕೇ ಹೊರತು ಅವರ ಮೇಲೆ ದೌರ್ಜನ್ಯ ಎಸಗುವಂತಹ ರಾಕ್ಷಸೀಯ ಮನಸ್ಥಿತಿಗೆ ಹೋಗಬಾರದು.

ಉದಯವಾಹಿನಿ ಚಿತ್ರ

ಅಂತಹ ಕೃತ್ಯಗಳನ್ನು ಎಸಗಿದರೆ, ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ತಡೆಯುವ ನಿಟ್ಟಿನಲ್ಲಿ ಕಠಿಣವಾದ ಪೋಟೊ ಕಾಯ್ದೆ ಜಾರಿಯಲ್ಲಿದೆ ಎಂದು ಎಚ್ಚರಿಕೆ ನೀಡಿದರು.

ಸಿವಿಲ್ ನ್ಯಾಯಾಧೀಶರಾದ ಲಕ್ಷ್ಮೀನರಸಿಂಹ ಮಾತನಾಡಿ, 'ಪೋಷಕರಿಗೆ ತಮ್ಮ ಮಕ್ಕಳಿಗೆ ಆಸ್ತಿ ಮಾಡಿಡುವ ಬದಲು, ಅವರನ್ನೇ ಆಸ್ತಿಯನ್ನಾಗಿ ಮಾಡಬೇಕು. ವಿದ್ಯಾರ್ಥಿಗಳು ಸಹ ಕಾಲೇಜು ಮಟ್ಟಿಲು ಹತ್ತುತ್ತಿದ್ದಂತೆ ಶಿಕ್ಷಣದ ಜೊತೆಯಲ್ಲಿಯೇ ಯಾವುದಾದರೂ ಕೆಲಸ ಮಾಡಿ. ಪದವಿ ಮುಗಿದು ಹೊರ ಬರುವಷ್ಟರಲ್ಲಿ ತಮ್ಮ ಕಾಲ ಮೇಲೆ ತಾವು ನಿಲ್ಲುವ ಶಕ್ತಿ ಬರುತ್ತದೆ' ಎಂದರು.

ಕಾನೂನು ಅರಿವು-ನೆರವು, ಕಾನೂನು ಸಾಕ್ಷರತಾ ಕಾರ್ಯಕ್ರಮ

• ಉದಯವಾಹಿನಿ ಕಾರಟಗಿ

ತಾಲ್ಲೂಕು ಕಾನೂನು ಸೇವಾ ಸಮಿತಿ ಹಾಗೂ, ನ್ಯಾಯವಾದಿಗಳ ಸಂಘ, ಗಂಗಾವತಿ,ಹಾಗೂ ವಿವಿಧ ಇಲಾಖೆಗಳ ಇವರುಗಳ ಸಂಯುಕ್ತ ಆಶ್ರಯದಲ್ಲಿ ಕಾನೂನು ಅರಿವು-ನೆರವು, ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಕಾರಟಗಿ ಪಟ್ಟಣದ ಪ್ರತಿಷ್ಠಿತ ಶ್ರೀ ಶರಣಬಸವೇಶ್ವರ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಶ್ರೀ ನಾಗೇಶ್ ಪಾಟಿಲ್ ಮತ್ತು ಸದಸ್ಯರು ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮಿತಿ ಇವರುಗಳಿಂದ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಸಸಿಗಳಿಗೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಗಂಗಾವತಿ ತಾಲ್ಲೂಕ ನ್ಯಾಯವಾದಿಗಳ ಸಂಘದ ಕಾರ್ಯದರ್ಶಿಗಳಾದ ವಕೀಲರಾದ ಎಚ್ ಎಮ್ ಮಂಜುನಾಥ ಮಾತನಾಡಿ ಪ್ರತಿಯೊಂದು ವಿದ್ಯಾರ್ಥಿ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.

ಕಡ್ಡಾಯವಾಗಿ ಶಿಕ್ಷಣವನ್ನು ಪಡೆಯಲೇಬೇಕು ಶಿಕ್ಷಣ ಪಡೆಯುವ ಹಂತದಲ್ಲಿ ಯಾರು ಕೂಡ ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗಬಾರದು, ಒಂದು ವೇಳೆ ಅಡ್ಡಿಯಾದರೆ ಅದು ಅಪರಾಧ ಪ್ರತಿಯೊಂದು ಮಗು 18 ವರ್ಷ ಪ್ರೌಡಾವಸ್ಥೆ ಬರುವವರೆಗೆ ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಮಗು ಎಂದು ಪರಿಗಣಿಸಲಾಗುತ್ತದೆ.

ಉದಯವಾಹಿನಿ ಚಿತ್ರ

ಮಕ್ಕಳ ರಕ್ಷಣೆಗಾಗಿ ಪೋಕ್ಸೋ

ಆದ್ದರಿಂದ ಮಕ್ಕಳ ವಿಚಾರದಲ್ಲಿ ಪ್ರತಿಯೊಬ್ಬರು ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ, ಅದೇ ರೀತಿ ಕಾನೂನಿನ ಅರಿವು ಮೂಡಿಸಬೇಕಾಗುತ್ತದೆ, ಮಕ್ಕಳ ಮೇಲೆ ಶೈಕ್ಷಣಿಕವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ದೈಹಿಕವಾಗಿ ಮಾನಸಿಕವಾಗಿ ಶೋಷಣೆ ಮಾಡುವುದು ಪೋಕ್ಸೋ ಕಾಯ್ದೆ ವ್ಯಾಪ್ತಿಗೆ ಒಳಪಡುತ್ತವೆ, ಪೋಕ್ಸೋ ಕಾಯ್ದೆ ಅಡಿಯಲ್ಲಿ ತಪ್ಪಿತಸ್ಥರನ್ನು ಶಿಕ್ಷಿಸಲಾಗುತ್ತದೆ.

ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಹಾಗೂ ರಕ್ಷಣೆಗಾಗಿ ಪೋಕ್ಸೋ ಕಾಯ್ದೆಯನ್ನು ಜಾರಿ ಮಾಡಲಾಗಿದೆ ಪ್ರತಿಯೊಂದು ಶಾಲೆಗಳಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಅದೇ ರ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	01:30 ರಿಂದ 03:00
ಗುಳಿಕಕಾಲ	ಬೆಳಿಗ್ಗೆ	09:00 ರಿಂದ 10:30
ಯಮಗಂಡಕಾಲ	ಬೆಳಿಗ್ಗೆ	06:00 ರಿಂದ 07:30

ಮೇಷ ಸಂತೋಷದಿಂದ ತುಂಬಿದ ಒಳ್ಳೆಯ ದಿನ. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ ಆದ್ದರಿಂದ ಇಂದು ಯೋಚಿಸಿ ಅರ್ಥಮಾಡಿಕೊಂಡು ನಡೆಯಿರಿ.

ವೃಷಭ ಪ್ರೀತಿ ಯಾವಾಗಲೂ ಭಾವಪೂರ್ಣವಾಗಿದೆ, ಮತ್ತು ನೀವು ಇದನ್ನು ಅನುಭವಿಸುತ್ತೀರಿ. ಇದು ನಿಮ್ಮನ್ನು ವ್ಯಕ್ತಪಡಿಸಲು ಮತ್ತು ಸೃಜನಶೀಲ ಸ್ವರೂಪದ ಯೋಜನೆಗಳಲ್ಲಿ ಕೆಲಸ ಮಾಡಲು ಒಳ್ಳೆಯ ಸಮಯ.

ಮಿಥುನ ನಿಮ್ಮ ದೈಹಿಕ ಆರೋಗ್ಯವನ್ನು ಸುಧಾರಿಸಲು ಸಮತೋಲಿತ ಆಹಾರ ತೆಗೆದುಕೊಳ್ಳಿ ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು.

ಕರ್ಕಾಟಕ ನಿಮ್ಮ ಧೀರ್ಘಕಾಲೀನ ಅನಾರೋಗ್ಯದ ಜೊತೆ ಹೋರಾಡುವಾಗ ಆತ್ಮವಿಶ್ವಾಸ ಶೌರ್ಯದ ಮೂಲವೆಂದು ತಿಳಿದಿರಿ. ನಿಮ್ಮ ಕಚೇರಿಯ ಸಹೋದ್ಯೋಗಿ ನಿಮ್ಮ ಅಮೂಲ್ಯವಾದ ವಸ್ತುವನ್ನು ಕದಿಯಬಹುದು.

ಸಿಂಹ ಸಂಗಾತಿಯ ಆರೋಗ್ಯಕ್ಕೆ ಸೂಕ್ತ ರಕ್ಷಣೆ ಮತ್ತು ಗಮನದ ಅಗತ್ಯವಿದೆ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ. ತಪ್ಪು ಸಮಯದಲ್ಲಿ ತಪ್ಪು ವಿಷಯಗಳನ್ನು ಹೇಳದಿರಲು ಪ್ರಯತ್ನಿಸಿ.

ಕನ್ಯಾ ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ವೆಚ್ಚಗಳಲ್ಲಿ ನಿಮಗೆ ಉಳಿಸಲು ಕಷ್ಟವಾಗಿಸುತ್ತದೆ.

ತುಲಾ ನೀವು ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ.

ವೃಶ್ಚಿಕ ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ.

ಧನಸ್ಸು ನೀವು ನಡೆಯುವಾಗ ಹೆಚ್ಚು ಜಾಗರೂಕರಾಗಿರಬೇಕು. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ, ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ಮಕರ ಸಂಜೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ. ನೀವು ನಿಮ್ಮನ್ನು ಒಂದು ರೋಮಾಂಚಕಾರಿ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬಹುದು–ಇದು ನಿಮಗೆ ಆರ್ಥಿಕ ಲಾಭವನ್ನೂ ತರುತ್ತದೆ.

ಕುಂಭ ಇಂದು ನೀವು ಆರಾಮವಾಗಿರಬೇಕು ಹಾಗೂ ನಿಕಟ ಸ್ನೇಹಿತರು ಮತ್ತು ಕುಟುಂಬದ ಎಲ್ಲಾ ಸದಸ್ಯರನ್ನು ಸಂತೋಷವಾಗಿರಿಸಲು ಪ್ರಯತ್ನಿಸಬೇಕು. ನಕ್ಷತ್ರಪುಂಜಗಳ ಚಾಲನೆ ನಿಮಗಾಗಿ ಉತ್ತಮವಾಗಿಲ್ಲ.

ಮೀನ ನಿಮ್ಮ ಜೀವನವನ್ನು ಲಘುವಾಗಿ ತೆಗೆದುಕೊಳ್ಳಬೇಡಿ ನೆನಪಿಡಿ, ಬದುಕಿನ ರಕ್ಷಣೆ ನಿಜವಾದ ಆಣಿ. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ.

ಒಂದು ಸಮುದಾಯಕ್ಕೆ ಸೇರಿದವನು ಎಂದು ತೇಜೋವಧೆ: ಎಂ.ಶಮಿವುಲ್ಲಾ

● ಒಮ್ಮೆ ಕರೆ ನೀಡಿದರೆ ಸಹಸ್ರಾರು ಜನ ಎಲ್ಲಾ ವರ್ಗ ಸಮುದಾಯದವರನ್ನು ಸೇರಿಸುವ ಶಕ್ತಿ ಇದೆ

• ಉದಯವಾಹಿನಿ ಹಾಸನ

ಉದಯವಾಹಿನಿ ಚಿತ್ರ

ನಾನು ಸಹ ಅರಸೀಕೆರೆ ತಾಲ್ಲೂಕಿನ ಮಗ

ನನ್ನನ್ನು ವೈಯಕ್ತಿಕವಾಗಿ ಒಂದು ಜನಾಂಗಕ್ಕೆ ಹಾಗೂ ಸಮುದಾಯಕ್ಕೆ ಸೇರಿದವನೆಂದು ಬಿಂಬಿಸಲಾಗುತ್ತಿದ್ದು ನಾನು ಸಹ ಅರಸೀಕೆರೆ ತಾಲ್ಲೂಕಿನಲ್ಲಿ ಹುಟ್ಟಿ ಬೆಳೆದವನಾಗಿದ್ದು ನಾನು ನನ್ನ ರಾಜಕೀಯ ಜೀವನದಲ್ಲಿ ಎಲ್ಲಾ ಸಮುದಾಯ ಕೆಳ ವರ್ಗದ ಜನರ ಜೊತೆಯಲ್ಲಿ ಬೆರೆತು ನಾನು ಸಹ ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ಕರೆ ನೀಡಿದರೆ ಸಹಸ್ರಾರು ಮಂದಿ ಎಲ್ಲಾ ವರ್ಗ ಸಮುದಾಯದ ಜನರನ್ನು ಸೇರಿಸುವ ಶಕ್ತಿ ಇದೆ.

ಇದಲ್ಲದೆ ಇತ್ತೀಚಿಗೆ ಅರಸೀಕೆರೆ ನಗರಸಭೆ ಆವರಣದಲ್ಲಿ ನಡೆದ ಎನ್ ಆರ್ ಸಂತೋಷ್ ಮತ್ತು ಅವರ ಬೆಂಬಲಿಗರು ಪ್ರತಿಭಟನೆ ವೇಳೆಯಲ್ಲಿ ನನ್ನನ್ನು ಮತ್ತು ಶಾಸಕರಾದ ಶಿವಲಿಂಗೇಗೌಡರನ್ನು ಏಕವಚನದಲ್ಲಿ ನಿಂದಿಸಿದ್ದರ ಪರಿಣಾಮ ನಮ್ಮ ಅಭಿಮಾನಿಗಳು ಮತ್ತು ಎರಡು ಗುಂಪುಗಳ ಮದ್ದೆ ಮಾತಿನ ವಾಕ್ ಸಮರ ನಡೆಯಿತು ಇದನ್ನೇ ಎನ್ ಆರ್ ಸಂತೋಷ್ ತಪ್ಪಾಗಿ ಬಿಂಬಿಸಿ ಅರಸೀಕೆರೆ ಕ್ಷೇತ್ರದಿಂದ ಸುಳ್ಳು ಸುದ್ದಿ ಹಬ್ಬಿಸಿ ಬಂದ್ ನಡೆಸಿರುವುದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಈ ಹಿಂದೆ ಅರಸೀಕೆರೆ ಕ್ಷೇತ್ರದ ರಾಜ್ಯದಲ್ಲಿ ಪ್ರಸಿದ್ಧಿ ಹೊಂದಿರುವ ಶ್ರೀ ಜೇನುಕಲ್ ಬೆಟ್ಟದ ರಸ್ತೆ ಕಾಮಗಾರಿ ನಡೆಸಿದ ವೇಳೆಯಲ್ಲಿ ರಾಜ್ಯಮಟ್ಟದ ಅಧಿಕಾರಿಯೊಬ್ಬರು ದೇವಾಲಯಕ್ಕೆ ಭೇಟಿ ಕೊಟ್ಟ ವೇಳೆಯಲ್ಲಿ ರಸ್ತೆ ಗುಣಮಟ್ಟ ಅತ್ಯುತ್ತಮವಾಗಿದೆ ಎಂದು ನನ್ನನ್ನು ಕರೆಯಿಸಿ ಕೂಡಲೇ ಬಿಲ್ ಮಂಜೂರು ಮಾಡಿಸಿಕೊಟ್ಟಿದ್ದರು, ಆ ವೇಳೆಯಲ್ಲಿ ಅಧಿಕಾರಿ ಒಂದು ಕಿವಿಮಾತು ಹೇಳಿದ್ದರು. ಅರಸೀಕೆರೆಯಲ್ಲಿ ಎರಡು ಮೂರು ಗಲಾಟೆ ಮಾಡಿಸಿದರೆ ಶಾಸಕರಾಗಬಹುದೆಂದು ಅವರ ಬಳಿ ಎನ್ ಆರ್ ಸಂತೋಷ ಮಾತನಾಡಿದ್ದರು ಆ ವಿಚಾರ ತಿಳಿದಾಗಿನಿಂದಲೂ ನಾವು ಅರಸೀಕೆರೆಯಲ್ಲಿ ಇದ್ದು ಇಲ್ಲದ ರೀತಿಯಲ್ಲಿ ಯಾವುದೇ ಗಲಾಟೆಗಳಿಗೆ ಆಸ್ಪದ ಕೊಡದೆ. ಶಾಂತಿಯಿಂದ ಜೀವನ ಸಾಗಿಸುತ್ತಿದ್ದೇವೆ ಎಂದು ಹೇಳಿದರು. ಪಕ್ಷದ ಮುಖಂಡರಾದ ಹರೀಶ್ .ಮಲ್ಲಿಕಾರ್ಜುನ್. ಎನ್ ಆರ್ ಸಂತೋಷ್ ರವರ ರಾಜಕೀಯ ನಡೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು ನಗರಸಭೆ ಉಪಾಧ್ಯಕ್ಷರಾದ ಮನೋಹರ್. ಸದಸ್ಯರುಗಳಾದ ಗಣೇಶ್. ವೆಂಕಟಮನಿ. ರಾಜು ಇಮ್ರಾನ್ ಖಾನ್. ಸಿಕಂದರ್. ಸೇರಿದಂತೆ ಹಲವಾರು ಮುಖಂಡರುಗಳು ಅಭಿಮಾನಿಗಳು ಉಪಸ್ಥಿತರಿದ್ದರು.

● ಶಾಸಕರಾಗಬೇಕೆಂದರೆ ಜನರ ಪ್ರೀತಿ ವಿಶ್ವಾಸ ಗಳಿಸಬೇಕು ಅದನ್ನು ಬಿಟ್ಟು ಗುಂಪು ಗುಂಪುಗಳನ್ನಾಗಿ ಮಾಡಿ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಉಂಟು ಮಾಡಿ ಇನ್ನೊಬ್ಬರಿಗೆ ತೇಜೋವಧೆ ಮಾಡಿದ ಮಾತ್ರಕ್ಕೆ ರಾಜಕಾರಣ ಮಾಡಿ ನಾಯಕರಾಗಲು ಸಾಧ್ಯವಿಲ್ಲ
–ಶಮಿವುಲ್ಲಾ

ನನ್ನನ್ನು ಏಕವಚನದಲ್ಲಿ ಪದೇ ಪದೇ ನಿಂದಿಸಲಾಗುತ್ತಿದೆ

ಉದಯವಾಹಿನಿ ಚಿತ್ರ

ನನ್ನನ್ನು ಏಕವಚನದಲ್ಲಿ ಪದೇ ಪದೇ ನಿಂದಿಸಲಾಗುತ್ತಿದೆ ಒಂದು ಸಮುದಾಯಕ್ಕೆ ಸೇರಿದವನು ಎಂದು ತೇಜುವದೇ ಮಾಡಲಾಗುತ್ತಿದೆ ಇದು ಸರಿಯಲ್ಲ ಇದು ಹೀಗೆ ಮುಂದುವರೆದರೆ ಇದಕ್ಕೆ ಸರಿಯಾದ ಉತ್ತರ ನೀಡಬೇಕಾಗುತ್ತದೆ. ನಾನು ಸಹ ಕಳೆದ 25 ವರ್ಷದಿಂದ ರಾಜಕೀಯದಲ್ಲಿದ್ದೇನೆ ಈ ಸಮಯದಲ್ಲಿ ಪ್ರತಿಭಟನೆ ಮಾಡಿದ್ದು ಸಹ ನನಗೆ ಗೊತ್ತಿದೆ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಚುನಾವಣೆಯ ಹತ್ತಿರದಲ್ಲಿ ಬರುತ್ತಿದ್ದು ಈ ಪ್ರತಿಭಟನೆಗಳನ್ನು ಅಸ್ತ್ರವನ್ನಾಗಿ ಮಾಡಿಕೊಂಡು ಜನರ ಬಳಿ ಹೋಗಬಹುದೆಂದು ತಿಳಿದಿದ್ದರೆ ಇದು ಒಳ್ಳೆಯ ಬೆಳವಣಿಗೆಯಲ್ಲ ಅರಸೀಕೆರೆ ಕ್ಷೇತ್ರದಲ್ಲಿ ಅಭಿವೃದ್ಧಿ ಯಾರಿಂದ ಆಗಿದೆ ಎಂದು ಜನಸಾಮಾನ್ಯರಿಗೆ ತಿಳಿದಿದೆ ಎಂದು ನಗರಸಭೆಯ ಅಧ್ಯಕ್ಷರಾದ ಎಂ ಶಮಿವುಲ್ಲಾ ತಿಳಿಸಿದರು.

ನಿಕ್ಷಯ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಡಾ. ಚಂದ್ರಕಾಂತ ಕರೆ

• ಉದಯವಾಹಿನಿ ಚಿತ್ರದುರ್ಗ

ಉದಯವಾಹಿನಿ ಚಿತ್ರ

ಕ್ಷಯ ಮುಕ್ತ ಅಭಿಯಾನ

ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ ಇವರ ವತಿಯಿಂದ ದಿನಾಂಕ 20.01.2025 ರಂದು ಕ್ಷಯ ಮುಕ್ತ ಅಭಿಯಾನದ ಅಂಗವಾಗಿ ನಿಕ್ಷಯ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು.ಈ ಕಾರ್ಯಗಾರದಲ್ಲಿ ಜಿಲ್ಲಾ ಕ್ಷಯ ನಿರ್ಮೂಲನಾ ಕಾರ್ಯಕ್ರಮಾಧಿಕಾರಿ ಡಾ.ಪ್ರಶಾಂತ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಜಿಲ್ಲೆಯ ಎಲ್ಲಾ ಆಯುಷ್ ವೈದ್ಯಾಧಿಕಾರಿಗಳಿಗೆ ಕ್ಷಯ ಮುಕ್ತ ಭಾರತ ಅಭಿಯಾನದ ಅಡಿಯಲ್ಲಿ ಕ್ಷಯ ರೋಗ ಪತ್ತೆ ಹಚ್ಚುವಿಕೆ ಹಾಗೂ ರೋಗದ ಚಿಕಿತ್ಸೆ ವಿಧಾನವನ್ನು ತಿಳಿಸಿದರು ಹಾಗೂ ಇನ್ನೋರ್ವ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ನಂದನ್ ಅವರು ನಿಕ್ಷಯ ಯೋಜನೆ ಅಭಿಯಾನ 100 ದಿನಗಳ ಅಭಿಯಾನವಾಗಿದ್ದು ಇದರ ಅಂಗವಾಗಿ ಹಮ್ಮಿಕೊಳ್ಳಬೇಕಾದ ವಿವಿಧ ಕಾರ್ಯಕ್ರಮಗಳನ್ನು ವಿವರಿಸಿದರು.

ಎಲ್ಲಾ ಆಯುಷ್ ವೈದ್ಯಾಧಿಕಾರಿಗಳನ್ನು ಉದ್ದೇಶಿಸಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಹೆಚ್ಚು ಹೆಚ್ಚು ರೋಗಿಗಳನ್ನು ಪತ್ತೆಹಚ್ಚಿ ಹತ್ತಿರದ ಕ್ಷಯ ನಿರ್ಮೂಲನ ಕೇಂದ್ರಗಳಿಗೆ ಕಳಿಸುವುದರ ಮೂಲಕ ಟಿಬಿ ಮುಕ್ತ ಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ಕೋರಿದರು.

ಇದೇ ಕಾರ್ಯಕ್ರಮದ ಅಂಗವಾಗಿ ಮಧ್ಯಾಹ್ನ ಚಿತ್ರದುರ್ಗ ಜಿಲ್ಲೆಯ ವಿವಿಧ ಖಾಸಗಿ ಆಯುರ್ವೇದ ಮಹಾವಿದ್ಯಾಲಯದ ಪ್ರಾಂಶುಪಾಲರು,ಖಾಸಗಿ ವೈದ್ಯರ ಸಂಘದ ಪದಾಧಿಕಾರಿಗಳು, NIMA, AFI ಸಂಘದ ಪದಾಧಿಕಾರಿಗಳು ಜಿಲ್ಲೆಯ ಸಂಚಾಲಕರು ಮತ್ತು ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ರೊಂದಿಗೆ ಅಭಿಯಾನದ ಯಶಸ್ವಿಗೆ ಸಂಬಂಧಿಸಿದಂತೆ ಸಭೆಯನ್ನು ಕರೆಯಲಾಗಿತ್ತು.

ಈ ಸಭೆಯಲ್ಲಿ ಇದೆ ಜನವರಿ 28ರಂದು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧನೆ ಹಾಗೂ 30ನೇ ತಾರೀಕು ಸಾರ್ವಜನಿಕರಿಗೆ ಅರಿವನ್ನು ಮೂಡಿಸಲು ಚಿತ್ರದುರ್ಗದ ಪ್ರಮುಖ ಬೀದಿಗಳಲ್ಲಿ ಜಾತವನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು ಹೀಗೆ ವಿವಿಧ ಹಂತದಲ್ಲಿ ಕ್ಷಯ ಮುಕ್ತವಾಗಿಸಲು ವಿವಿಧ ಕಾರ್ಯಕ್ರಮಗಳನ್ನು ಜಿಲ್ಲಾ ಕೇಂದ್ರ ಹಮ್ಮಿಕೊಳ್ಳಲಾಗುತ್ತಿದೆ. ಕಾರ್ಯಕ್ರಮ ಯಶಸ್ವಿಯಾಗಲು ಸಮಿತಿಯನ್ನು ರಚಿಸಿದ್ದು ಓರ್ವ ಜಿಲ್ಲಾ ಸಂಚಾಲಕರನ್ನು ನೇಮಿಸಿದ್ದು ಡಾ.ಪ್ರಶಾಂತ್ ಅವರು ಈ ಕಾರ್ಯಕ್ರಮದ ಮೇಲ್ವಿಚಾರಣೆ ವಹಿಸಲಿದ್ದಾರೆ ಎಂದು ಡಾ.ಚಂದ್ರಕಾಂತ್ ನಾಗಸಮುದ್ರ ಜಿಲ್ಲಾ ಆಯುಷ್ ಅಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಅಮೃತ ಆಯುರ್ವೇದ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ ಪ್ರಾಂಶುಪಾಲರಾದ ಶ್ರೀ ಡಾ. ಪ್ರಶಾಂತ್ ಪ್ರಕೃತಿ ಆಯುರ್ವೇದ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ ಪ್ರಾಂಶುಪಾಲರಾದ ಡಾಕ್ಟರ್ ನವಾಜ್ ಖಾಸಗಿ ವೈದ್ಯರ ಸಂಘದ ಪದಾಧಿಕಾರಿಗಳಾದ ಡಾ. ರಾಮರಾಜ್ ಜಿಲ್ಲಾ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷರಾದ ಡಾ. ಮಂಜುಳಾ ಜಿಲ್ಲಾ ನಿಕ್ಷಯ ಅಭಿಯಾನದ ಉಪ ಸಂಚಾಲಕರಾದ ಡಾಕ್ಟರ್ ಪ್ರಶಾಂತ್ ವೈದ್ಯಾಧಿಕಾರಿಗಳಾದ ಡಾಕ್ಟರ್ ನಾಗರಾಜ್ ಹಾಗು ಡಾ. ಶಿವಕುಮಾರ್ ಹಾಜರಿದ್ದರು.

ಬಡ ಕೂಲಿಕಾರ್ಮಿಕರ ಮೇಲೆ ಹಲ್ಲೆ

• ಉದಯವಾಹಿನಿ ಹುಣಸಗಿ

ಉದಯವಾಹಿನಿ ಚಿತ್ರ

ಬಿಜಾಪುರದ ಇಟ್ಟಂಗಿ ಬಟ್ಟಿಯಲ್ಲಿ ಕೆಲಸ ಮಾಡುತ್ತಿದ ಬಡ ಕೂಲಿ ಕಾರ್ಮಿಕರ ಮೇಲೆ ಇಟ್ಟಂಗಿ ಬಟ್ಟಿಯ ಮಾಲೀಕ ಹಾಗೂ ಅವನ ಬೆಂಬಲಿಗರು ಸೇರಿ ಹಲ್ಲೆ ಮಾಡಿದ್ದಾರೆ. ಇದಕ್ಕೆ ನಾಗರಿಕ ಸಮಾಜವೇ ತಲೆ ತಗ್ಗಿಸುವಂಥಾಗಿದೆ ಇಂತವರ ಮೇಲೆ ಸೂಕ್ತವಾದ ಕಾನೂನು ಕ್ರಮ ಕೈಗೊಂಡು ಶಿಕ್ಷೆಗೆ ಒಳಪಡಿಸಬೇಕು ಎಂದು ಸಾಮೂಹಿಕ ಸಂಘಟನೆಗಳ ಒಕ್ಕೂಟದ ಬಸವರಾಜ ಎಸ್ ಕಟ್ಟಿಮನಿ ಹೇಳಿದರು. ಪಟ್ಟಣದ ತಹಸಿಲ್ದಾರ ಕಾರ್ಯಾಲಯದ ಅಧಿಕಾರಿಗಳಿಗೆ ಮನವಿ ಪತ್ರ ನೀಡಿ ಮಾತನಾಡಿದ ಅವರು, ಸಂಕ್ರಾಂತಿ ಹಬ್ಬಕ್ಕೆ ಊರಿಗೆ ಹೋಗಿದ್ದ ಕಾರ್ಮಿಕರನ್ನು ಫೋನ್ ಮಾಡಿ ಕರೆಸಿಕೊಂಡು ಚಿತ್ರಹಿಂಸೆ ಕೊಟ್ಟಿದ್ದಾರೆ. ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಚಿಕ್ಕಲಕೀಯ ಗ್ರಾಮದ 3 ಜನ ದಲಿತ ಬಡ ಕೂಲಿ ಕಾರ್ಮಿಕರ ಮೇಲೆ ಹಲ್ಲೆ ಮಾಡಿದ್ದಲ್ಲದೆ ಜಾತಿ ನಿಂದನೆ ಮಾಡಿದ್ದಾರೆ. ಮಾಲೀಕನ ಬೆಂಬಲಿಗರು ಕಾರ್ಮಿಕರಿಗೆ ಮೂರು ದಿನಗಳ ಕಾಲ ಕೂಡಿ ಹಾಕಿ ಮಾನಸಿಕವಾಗಿ ಹಿಂಸೆ ನೀಡಿದ್ದಾರೆ. ದುಡಿದು ತಿನ್ನುವ ಬಡ ಕೂಲಿಕಾರ್ಮಿಕರ ಮೇಲೆ ಹಲ್ಲೇ ಮಾಡಿದವರಿಗೆ ಶಿಕ್ಷೆಗೆ ಒಳಪಡಿಸಿ ಬಡ ಮತ್ತು ಕಾರ್ಮಿಕರಿಗೆ ರಕ್ಷಣೆ ಒದಗಿಸಿ ಪರಿಹಾರ ನೀಡಿ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದರು. ಹಲ್ಲೆ ಮಾಡಿದವರ ಮೇಲೆ ಯಾವುದೇ ರೀತಿಯಾದ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಮಾನಗಳಲ್ಲಿ ಉಗ್ರವಾದ ಹೋರಾಟ ಮಾಡಲಾಗುತ್ತದೆ ಎಂದು ಹೇಳಿದರು. ಗಯ್ಯಪ್ಪ ಸೋನಾಪುರ, ಪರಮಣ್ಣ ಕಟ್ಟಿಮನಿ, ಸಂತೋಷ ದೇವರಮನಿ, ನಿಜಲಿಂಗಪ್ಪ ಅಗ್ನಿ, ತಾಯಪ್ಪ ಕನ್ನಳ್ಳಿ, ಚಂದ್ರಪ್ಪ ಕೊಡೆಕಲ್ ಇದ್ದರು.

ಚೌಡಯ್ಯನವರ ವಚನಗಳು ಸಮಾಜಕ್ಕೆ ಮಾದರಿ

ಉದಯವಾಹಿನಿ ಚಿತ್ರ

• ಉದಯವಾಹಿನಿ ವಡಗೇರಾ

ಪಟ್ಟಣದ ಡಿ. ಡಿ ಯು ಸಿ.ಬಿ.ಎಸ್ ಇ ಶಾಲೆಯಲ್ಲಿ ಹಮ್ಮಿಕೊಂಡಿದ್ದ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಶಿಕ್ಷಕರಾದ ವೆಂಕಟ್ ರೆಡ್ಡಿ .ಜ್ಯೋತಿ ಲಕ್ಷ್ಮಿ ಪೂಜೆ ಸಲ್ಲಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಸಜೀಸ್ ರಾಜ್ ವಹಿಸಿಕೊಂಡಿದ್ದರು. ಜಯಂತಿ ಕುರಿತು ಶಿಕ್ಷಕ ನಿಂಗಪ್ಪ ಪೂಜಾರಿ ಹೈಯಾಳ ಮಾತನಾಡಿದರು. ನಿಜಶರಣ ಅಂಬಿಗರ ಚೌಡಯ್ಯನವರ ವಚನಗಳು ಇಂದಿಗೂ ಸಮಾಜಕ್ಕೆ ಮಾದರಿಯಾಗಿವೆ ಶಿಕ್ಷಣದಿಂದ ಮಾತ್ರ ಮಕ್ಕಳ ಭವಿಷ್ಯ ಉಜ್ವಲಗೊಳ್ಳಲು ಸಾಧ್ಯ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು ಆದ್ದರಿಂದ ಪ್ರತಿಯೊಬ್ಬರು ತಪ್ಪದೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂದರು ನಿಜಶರಣ ಅಂಬಿಗರ ಚೌಡಯ್ಯನವರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುವುದರ ಜೊತೆಗೆ ಸಮಾಜದಲ್ಲಿ ತಮ್ಮ ವಚನಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ ಸಮ ಸಮಾಜ ನಿರ್ಮಾಣದ ಕನಸನ್ನು ಕಂಡಿದ್ದರು ವಿದ್ಯಾರ್ಥಿಗಳು ನಿಜಶರಣ ಅಂಬಿಗರ ಚೌಡಯ್ಯನವರ ತತ್ವ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಈ ಸಮಯದಲ್ಲಿ ರಾಹುಲ್, ರುಹಿ, ರಶಿದ್, ನಾಜಿಯ, ಭಾಗ್ಯ, ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು ಶಿಕ್ಷಕ ರಿಜ್ವಾನ ಇಬ್ರಾಹಿಂ ಸ್ವಾಗತಿಸಿದರು ಶಿಕ್ಷಕ ಮರೇಪ್ಪ ವಂದಿಸಿದರು

ವಿದ್ಯಾರ್ಥಿಗಳು ಸತತ ವಿದ್ಯಾಭ್ಯಾಸದಿಂದ ಗುರಿ ತಲುಪಲು ಸಾಧ್ಯ

• ಉದಯವಾಹಿನಿ, ಚಿಂಚೋಳಿ

ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳು ಗುರಿ ಇಟ್ಟುಕೊಂಡು ಸತತವಾಗಿ ವಿದ್ಯಾಭ್ಯಾಸ ಮಾಡಿದರೆ ಗುರಿ ತಲುಪಲು ಸಾಧ್ಯವಾಗುತ್ತದೆ ಆಗ ವಿದ್ಯಾರ್ಥಿಗಳು ಉನ್ನತಮಟ್ಟಕ್ಕೆ ಬೆಳೆಯುತ್ತಾರೆ ಎಂದು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ಹೇಳಿದರು.

ಪಟ್ಟ

ಅಮೆರಿಕದ ಪೌರತ್ವ ಪಡೆಯುವ ಲಕ್ಷಾಂತರ ಭಾರತೀಯರ ಆಸೆಗೆ ತಣ್ಣೀರು?

ಜನ್ಮಸಿದ್ಧ ಪೌರತ್ವ ನೀತಿ ವಿರೋಧಿ ಟ್ರಂಪ್ ಆಡಳಿತ; ಭಾರತೀಯರ ಆತಂಕ ಮತ್ತು ಆಯ್ಕೆಗಳೇನು?

ವಾಷಿಂಗ್ಟನ್: ಅಮೆರಿಕದ 47ನೇ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ ದಿನವೇ, ಡೊನಾಲ್ಡ್ ಟ್ರಂಪ್ ಅವರು ದೇಶದ ವಲಸೆ ನೀತಿಯನ್ನು ಮರು ರೂಪಿಸುವ ಮಹತ್ವದ ಘೋಷಣೆ ಮಾಡಿದ್ದಾರೆ. ಜನ್ಮಸಿದ್ಧ ಪೌರತ್ವದ ದೀರ್ಘಕಾಲದ ನೀತಿಯನ್ನೂ ಬದಲಾಯಿಸುವತ್ತ ಟ್ರಂಪ್ ಒಲವು ಹೊಂದಿದ್ದಾರೆ. ಇದರಿಂದಾಗಿ ಅಮೆರಿಕದಲ್ಲಿ ನೆಲೆಸಿರುವ ಮತ್ತು ಭವಿಷ್ಯದಲ್ಲಿ ಆ ದೇಶಕ್ಕೆ ಹೋಗಿ ನೆಲೆಸುವ ಲಕ್ಷಾಂತರ ಭಾರತೀಯರಲ್ಲಿ ಒಂದು ರೀತಿಯ ಆತಂಕ ಮನೆ ಮಾಡಿದೆ. ಹಾಗಿದ್ದರೆ ಟ್ರಂಪ್ ಅವರ ಕಠಿಣ ವಲಸೆ ನೀತಿ, ಜನ್ಮಸಿದ್ಧ ಪೌರತ್ವದ ಹಕ್ಕಿನ ಬದಲಾವಣೆ, ಭಾರತೀಯರ ಮೇಲೆ ಬರಬಹುದಾದ ಪರಿಣಾಮಗಳ ಕುರಿತು ಇಲ್ಲಿ ಚರ್ಚೆ ಮಾಡೋಣ. ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಲಸೆ ಮತ್ತು ಜನ್ಮಸಿದ್ಧ ಪೌರತ್ವ ನೀತಿ ಬದಲಾವಣೆ ಕ್ರಮವು ತೀವ್ರ ಚರ್ಚೆಯನ್ನು ಹುಟ್ಟುಹಾಕಿದೆ. ಟ್ರಂಪ್ ಅವರ ಈ ನಡೆ ಅಸಾಧಾರಣ ಕಾನೂನು ಸವಾಲುಗಳನ್ನು ಎದುರಿಸುವ ನಿರೀಕ್ಷೆಯಿದೆ. ಟ್ರಂಪ್ ಇದಕ್ಕಾಗಿ ಅಮೆರಿಕದ ಸಂವಿಧಾನದ 14ನೇ ತಿದ್ದುಪಡಿಯನ್ನು ಮಾರ್ಪಡಿಸಲು ಮುಂದಾಗಿದ್ದು, ಹಲವು ರೀತಿಯ ಆತಂಕ ಮತ್ತು ಸವಾಲುಗಳನ್ನು ಎದುರಿಗಿಟ್ಟಿದೆ.

ಪ್ರಸ್ತುತ ನೀತಿಯಲ್ಲಿನ ಈ ತೀವ್ರವಾದ ಬದಲಾವಣೆಯು ಅಮೆರಿಕದಲ್ಲಿ ನೆಲೆಸಿರುವ ಲಕ್ಷಾಂತರ ಭಾರತೀಯ-ಅಮೆರಿಕನ್ನರ ಮೇಲೆ ಪರಿಣಾಮ ಬೀರುವ ನಿರೀಕ್ಷೆಯಿದೆ. ಅವರಲ್ಲಿ ಅನೇಕರು ದಶಕಗಳಿಂದ ಗ್ರೀನ್ ಕಾರ್ಡ್‌ಗಳಿಗಾಗಿ ಕಾಯುತ್ತಿದ್ದಾರೆ. ಟ್ರಂಪ್ ಆಡಳಿತವು ಜನ್ಮಸಿದ್ಧ ಪೌರತ್ವವನ್ನು ಹಾಸ್ಯಾಸ್ಪದ ಎಂದು ಪರಿಗಣಿಸಿದೆ. ಅಲ್ಲದೇ ಈ ನೀತಿಯನ್ನು ಕೊನೆಗೊಳಿಸುವುದು ಅಕ್ರಮ ವಲಸೆಯನ್ನು ತಡೆಯುತ್ತದೆ

ಎಂದು ನಂಬಿದೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ ಜನಿಸಿದ ಪ್ರತಿಯೊಬ್ಬರಿಗೂ ಸಾರ್ವತ್ರಿಕವಾಗಿ ಪೌರತ್ವವನ್ನು ವಿಸ್ತರಿಸಲು 14ನೇ ತಿದ್ದುಪಡಿಯನ್ನು ಎಂದಿಗೂ ಅರ್ಥೈಸಲಾಗಿಲ್ಲ ಎಂದು ಟ್ರಂಪ್ ಆದೇಶದಲ್ಲಿ ಉಲ್ಲೇಖಿಸಿರುವುದು ಇದಕ್ಕೆ ಪುಷ್ಟಿ ಒದಗಿಸಿದೆ.

ಆತಂಕವೇನು?: ಆದಾಗ್ಯೂ, ಈ ಕ್ರಮವು ದುರ್ಬಲ ಸಮುದಾಯಗಳನ್ನು ಮತ್ತಷ್ಟು ಅಂಚಿನಲ್ಲಿಡಲು ಮತ್ತು ವಲಸಿಗ ಕುಟುಂಬಗಳಿಗೆ ಅನಿಶ್ಚಿತತೆಯನ್ನು ಸೃಷ್ಟಿಸಲು ಮಾತ್ರ ಸಹಾಯ ಮಾಡುತ್ತದೆ ಎಂದು ವಿಮರ್ಶಕರು ವಾದಿಸುತ್ತಾರೆ. ಈ ನೀತಿಯ ಪರಿಣಾಮಗಳು ದೂರಗಾಮಿಯಾಗಿದ್ದು, ಶಾಲೆಗಳು, ಕೆಲಸದ ಸ್ಥಳಗಳು, ಸಂಪೂರ್ಣ ಸಮುದಾಯಗಳ ಮೇಲೆ ಭಾರೀ ದುಷ್ಪರಿಣಾಮ ಬೀರಲಿದೆ ಎಂಬ ಆತಂಕ ವ್ಯಕ್ತಪಡಿಸಲಾಗಿದೆ. ನೀತಿಯಲ್ಲಿನ ಬದಲಾವಣೆಯು ಆದೇಶ ಹೊರಡಿಸಿದ 30 ದಿನಗಳ ನಂತರ ಜಾರಿಗೆ ಬರಲಿದ್ದು, ಇದಕ್ಕೆ ಎದುರಾಗಬಹುದಾದ ಕಾನೂನು ಸವಾಲುಗಳ ವಿಮರ್ಶೆಗೆ ಟ್ರಂಪ್ ಆಡಳಿತ ಅವಕಾಶ ಪಡೆದುಕೊಂಡಿದೆ. ಈ ನೀತಿಯ ಅತ್ಯಂತ ಮಹತ್ವದ ಪರಿಣಾಮವೆಂದರೆ ತಮ್ಮ ಮಕ್ಕಳಿಗೆ ಅಮೆರಿಕದ ಪೌರತ್ವ ದೊರೆಯಲಿ ಎಂಬ ಏಕೈಕ ಕಾರಣಕ್ಕೆ ಅಲ್ಲಿಗೆ ಜನ್ಮ ಪ್ರವಾಸ ಕೈಗೊಳ್ಳುತ್ತಿರುವ ಭಾರತೀಯ ಕುಟುಂಬಗಳು ಅತಂತ್ರ ಸ್ಥಿತಿಗೆ ತಲುಪಲಿವೆ. ಅಮೆರಿಕಕ್ಕೆ ಪ್ರಯಾಣಿಸುವುದನ್ನು ಒಳಗೊಂಡಿರುವ ಬರ್ತ್ ಟೂರಿಸಂ, ಮೆಕ್ಸಿಕನ್ ಮತ್ತು ಭಾರತೀಯ ಕುಟುಂಬಗಳಿಗೆ, ತಮ್ಮ ಮಕ್ಕಳಿಗೆ ಅಮೆರಿಕದ ಪೌರತ್ವ ಒದಗಿಸಲು ಅತ್ಯಂತ ಜನಪ್ರಿಯ ಮಾರ್ಗವಾಗಿದೆ. ಆದಾಗ್ಯೂ, ಟ್ರಂಪ್ ಅವರ ಹೊಸ ನೀತಿಯು ಈ ಮಾರ್ಗವನ್ನು ಸಂಪೂರ್ಣವಾಗಿ ಮುಚ್ಚುವ ನಿರೀಕ್ಷೆಯಿದೆ.

14ನೇ ತಿದ್ದುಪಡಿ ಏನು ಹೇಳುತ್ತದೆ?

ಅಮೆರಿಕದ ಸಂವಿಧಾನದ 14ನೇ ತಿದ್ದುಪಡಿ ಪ್ರಕಾರ ಅಮೆರಿಕದಲ್ಲಿ ಜನಿಸಿದ ಎಲ್ಲರೂ ಸಹಜವಾಗಿ ದೇಶದ ಪೌರತ್ವಕ್ಕಾಗಿ ಅರ್ಹರಾಗುತ್ತಾರೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ ಜನಿಸಿದ ಎಲ್ಲಾ ವ್ಯಕ್ತಿಗಳು ಪೌರತ್ವಕ್ಕೆ ಅರ್ಹರಾಗಿದ್ದು, ಯುನೈಟೆಡ್ ಸ್ಟೇಟ್ಸ್ ಮತ್ತು ಅವರು ವಾಸಿಸುವ ರಾಜ್ಯದ ನಾಗರಿಕರು.. ಎಂದು ಅಮೆರಿಕದ ಸಂವಿಧಾನದ 14ನೇ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಇದೀಗ ಡೊನಾಲ್ಡ್ ಟ್ರಂಪ್ ಅವರ ಕಾರ್ಯನಿರ್ವಾಹಕ ಆದೇಶವು, ಈ ತಿದ್ದುಪಡಿಯನ್ನು ಮರುವ್ಯಾಖ್ಯಾನಿಸಲು ಮುಂದಾಗಿದೆ. ವಿಶೇಷವಾಗಿ ಸೂಕ್ತ ದಾಖಲೆಗಳಿಲ್ಲದ ಪೋಷಕರಿಗೆ ಜನಿಸಿದ ಮಕ್ಕಳು, ಅಮೆರಿಕದ ಸ್ವಯಂಚಾಲಿತ ಪೌರತ್ವಕ್ಕೆ ಅರ್ಹರಾಗಿರುವುದಿಲ್ಲ ಎಂದು ಟ್ರಂಪ್ ಅವರ ಕಾರ್ಯನಿರ್ವಾಹಕ ಆದೇಶ ಪ್ರತಿಪಾದಿಸುತ್ತದೆ.

ಮಣಿಪುರ ವಿರಸ ಸುಳ್ಳೆಂದ ಜೆಡಿಯು

ಹೊಸದಿಲ್ಲಿ: ಮಹತ್ವದ ಬೆಳವಣಿಗೆಯೊಂದರಲ್ಲಿ ಮಣಿಪುರ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂಪಡೆದಿಲ್ಲ ಎಂದು ಜನತಾ ದಳ ಪಕ್ಷ ಸ್ಪಷ್ಟಪಡಿಸಿದೆ. ಅಲ್ಲದೇ ಬೆಂಬಲ ಹಿಂಪಡೆಯುವ ಏಕಪಕ್ಷೀಯ ನಿರ್ಧಾರ ತೆಗೆದುಕೊಂಡ ಮಣಿಪುರ ರಾಜ್ಯಾಧ್ಯಕ್ಷರನ್ನು ಅವರ ಸ್ಥಾನದಿಂದ ಜೆಡಿಯು ವಜಾಗೊಳಿಸಿದೆ.

ಹೌದು, ಮಣಿಪುರ ಸರ್ಕಾರಕ್ಕೆ ನೀಡಿರುವ ಬೆಂಬಲ ಹಿಂಪಡೆದಿರುವುದಾಗಿ ಮಣಿಪುರದ ಜೆಡಿಯು ಘಟಕದ ಮುಖ್ಯಸ್ಥರಾದ ಕ್ಷ ಬಿರೇನ್ ಸಿಂಗ್ ಘೋಷಿಸಿದ್ದರು. ಅಲ್ಲದೇ ಈ ಕುರಿತು ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರಿಗೆ ಪತ್ರ ಬರೆದಿದ್ದ ಅವರು, ಮಣಿಪುರ ವಿಧಾನಸಭೆಯಲ್ಲಿ ಜೆಡಿಯು ಪಕ್ಷದ ಏಕೈಕ ಶಾಸಕ ಎಂ.ಡಿ. ಅಬ್ದುಲ್ ನಾಸಿರ್ ಅವರಿಗೆ ವಿರೋಧ ಪಕ್ಷದ ಸಾಲಿನಲ್ಲಿ ಆಸನದ ವ್ಯವಸ್ಥೆ ಮಾಡುವಂತೆ ಕೋರಿದ್ದರು. ಆದರೆ ಮಣಿಪುರ ರಾಜ್ಯಾಧ್ಯಕ್ಷರ ನಿರ್ಧಾರವನ್ನು ಬರ್ಕಾಸ್ತು ಗೊಳಿಸಿರುವ ಜೆಡಿಯು ಹೈಕಮಾಂಡ್, ಏಕಪಕ್ಷೀಯ ನಿರ್ಧಾರ ತೆಗೆದುಕೊಂಡ ಕಾರಣಕ್ಕೆ ಕ್ಷ ಬಿರೇನ್ ಸಿಂಗ್ ಅವರನ್ನು ರಾಜ್ಯಾಧ್ಯಕ್ಷರ ಸ್ಥಾನದಿಂದ ವಜಾಗೊಳಿಸಿದೆ. ಈ ಕುರಿತು ಮಾತನಾಡಿರುವ ಜೆಡಿಯು ರಾಷ್ಟ್ರೀಯ ವಕ್ತಾರ ರಾಜೀವ್ ರಂಜನ್ ಪ್ರಸಾದ್, ಇದು ಮಣಿಪುರದ ಜನರನ್ನು ತಪ್ಪು ದಾರಿಗೆಳೆಯುವ ನಡೆಯಾಗಿದ್ದು, ರಾಜ್ಯ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂಪಡೆದಿರುವ ವರದಿಗಳು ಆಧಾರರಹಿತ ಎಂದು ಸ್ಪಷ್ಟಪಡಿಸಿದ್ದಾರೆ. ಮಣಿಪುರಕ್ಕೆ ಸಂಬಂಧಿಸಿದಂತೆ ಏಕಪಕ್ಷೀಯ ನಿರ್ಧಾರ ಕೈಗೊಂಡ ಪಕ್ಷದ ಮಣಿಪುರ ಘಟಕದ ಅಧ್ಯಕ್ಷರನ್ನು ಅವರ ಸ್ಥಾನದಿಂದ ವಜಾಗೊಳಿಸಲಾಗಿದೆ. ನಾವು ಮಣಿಪುರದಲ್ಲಿ ಎನ್‌ಡಿಎಗೆ ಬೆಂಬಲ ನೀಡಿದ್ದೇವೆ ಮತ್ತು ನಮ್ಮ ಬೆಂಬಲವನ್ನು ಮುಂದುವರೆಸುತ್ತೇವೆ ಎಂದು ರಾಜೀವ್ ರಂಜನ್ ಪ್ರಸಾದ್ ಹೇಳಿದ್ದಾರೆ. ಬೆಂಬಲ ಹಿಂಪಡೆಯುವ ವಿಚಾರವಾಗಿ ಪಕ್ಷದ ಮಣಿಪುರ ಘಟಕವು, ಕೇಂದ್ರ ನಾಯಕತ್ವದೊಂದಿಗೆ ಯಾವುದೇ ಸಂವಹನ ನಡೆಸಿಲ್ಲ. ಏಕಪಕ್ಷೀಯವಾಗಿ ಬೆಂಬಲ ಹಿಂಪಡೆಯುವ ಕುರಿತು ರಾಜ್ಯಪಾಲರಿಗೆ ಪತ್ರ ಬರೆದಿ ರುವುದನ್ನು ಆಶಿಸಿನ ನಡೆ ಎಂದು ಪಕ್ಷ ಪರಿಗಣಿಸಿದೆ. ಈ ಹಿನ್ನೆಲೆಯಲ್ಲಿ ಕ್ಷ ಬಿರೇನ್ ಸಿಂಗ್ ಅವರನ್ನು ಮಣಿಪುರ ಜೆಡಿಯು ರಾಜ್ಯಾಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಗಿದೆ. ಎಂದು ಜೆಡಿಯು ರಾಷ್ಟ್ರೀಯ ವಕ್ತಾರ ಮಾಹಿತಿ ನೀಡಿದ್ದಾರೆ.



ಮಣಿಪುರದಲ್ಲಿ ನಾವು ಎನ್‌ಡಿಎ ಜೊತೆಗಿದ್ದು, ಪಕ್ಷದ ರಾಜ್ಯ ಘಟಕವು ಮಣಿಪುರದ ಜನರ ಸೇವೆಯನ್ನು ಮತ್ತು ರಾಜ್ಯದ ಅಭಿವೃದ್ಧಿಗಾಗಿ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಮುಂದುವರೆಸುತ್ತದೆ. ಎಂದು ರಾಜೀವ್ ರಂಜನ್ ಪ್ರಸಾದ್ ತಿಳಿಸಿದ್ದಾರೆ.

ಮಣಿಪುರದಲ್ಲಿರುವ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವನ್ನು, ಜೆಡಿಯು ಮಣಿಪುರ ಘಟಕವು ಬೆಂಬಲಿಸುವುದಿಲ್ಲ ಮತ್ತು ನಮ್ಮ ಪಕ್ಷದ ಏಕೈಕ ಶಾಸಕ ಎಂ.ಡಿ. ಅಬ್ದುಲ್ ನಾಸಿರ್ ಅವರನ್ನು, ಸದನದಲ್ಲಿ ವಿರೋಧ ಪಕ್ಷದ ಶಾಸಕರನ್ನಾಗಿ ಪರಿಗಣಿಸಲಾಗುವುದು. ಎಂದು ಮಣಿಪುರದ ಜೆಡಿಯು ಘಟಕದ ಮುಖ್ಯಸ್ಥರಾದ ಕ್ಷ ಬಿರೇನ್ ಸಿಂಗ್ ಅವರು ರಾಜ್ಯಪಾಲರಿಗೆ ಬರೆದಿರುವ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು.

ಭಾರತದ ಪರಮಾಣು ರಿಯಾಕ್ಟರ್‌ಗಳು ಸುರಕ್ಷಿತವಾಗಿವೆ

ದಾವೋಸ್: ಭಾರತದ ಪರಮಾಣು ರಿಯಾಕ್ಟರ್‌ಗಳು ಸಂಪೂರ್ಣವಾಗಿ ಸುರಕ್ಷಿತವಾಗಿದೆ ಏಕೆಂದರೆ ಅದು ತನ್ನ ನಾಗರಿಕ ಪರಮಾಣು ಕಾರ್ಯಕ್ರಮಕ್ಕೆ ಅತ್ಯುನ್ನತ ಮಟ್ಟದ ಸುರಕ್ಷತಾ ಮಾನದಂಡಗಳನ್ನು ಅನ್ವಯಿಸಿಕೊಂಡಿದೆ ಎಂದು ಜಾಗತಿಕ ಪರಮಾಣು ವಾಚ್‌ಡಾಗ್ ಇಂಟರ್ನ್ಯಾಷನಲ್ ಆಟಾಮಿಕ್ ಎನರ್ಜಿ ಏಜೆನ್ಸಿ ಮುಖ್ಯಸ್ಥ ತಿಳಿಸಿದ್ದಾರೆ. ದಾವೋಸ್ 2025 ರ ಸಂದರ್ಭದಲ್ಲಿ ಸಂದರ್ಶನವೊಂದರಲ್ಲಿ, ಭಾರತದ ಪರಮಾಣು ರಿಯಾಕ್ಟರ್‌ಗಳು ಎಷ್ಟು ಸುರಕ್ಷಿತ ಎಂದು ಸಂಸ್ಥೆಯ ಮಹಾನಿರ್ದೇಶಕ ರಾಫೆಲ್ ಮರಿಯಾನೊ ಗ್ರಾಸ್ಸಿ ಅವರು ತಿಳಿಸಿದ್ದಾರೆ.



ಭಾರತವು ತನ್ನ ನಾಗರಿಕ ಪರಮಾಣು ಕಾರ್ಯಕ್ರಮಕ್ಕೆ ಅಂತರಾಷ್ಟ್ರೀಯವಾಗಿ ಒಪ್ಪಿಕೊಂಡಿರುವ ಅತ್ಯುನ್ನತ ಹಂತಗಳನ್ನು ಅನ್ವಯಿಸುತ್ತದೆ ಮತ್ತು ಪರಮಾಣು ಸುರಕ್ಷತಾ ಮಾನ ದಂಡಗಳು ಮತ್ತು ಭದ್ರತಾ ಮಾರ್ಗದರ್ಶನದೊಂದಿಗಿದೆ ಎಂದು ಅವರು ಉತ್ತರಿಸಿದರು. ಭಾರತದ ವೇಗದ ಬ್ರೀಡರ್ ಪರಮಾಣು ರಿಯಾಕ್ಟರ್ ಕಾರ್ಯಕ್ರಮದ ಕುರಿತು, ಅದರಲ್ಲಿ ಮೊದಲನೆಯದನ್ನು ತಮಿಳುನಾಡಿನ ಕಲ್ಪಾಕ್ಕಂನಲ್ಲಿ ಅಭಿವದ್ಧಿಪಡಿಸಲಾಗುತ್ತಿದೆ, ಇದು ಅದರ ಫ್ಲೀಟ್‌ಗೆ ಆಸಕ್ತಿದಾಯಕ ಆಡ್-ಆನ್ ಆಗಿರಬಹುದು ಎಂದು ಹೇಳಿದರು. 1998 ರಲ್ಲಿ ಪೋಖ್ರಾನ್ ಪರೀಕ್ಷೆಯ ನಂತರ ಭಾರತವು ಪರಮಾಣು ಸ್ಫೋಟಕ ಪರೀಕ್ಷೆಯ ಮೇಲೆ ಸ್ವಯಂಪ್ರೇರಿತವಾಗಿ ನಿಷೇಧವನ್ನು ವಿಧಿಸಿದೆ. ಚೀನಾ ಅಥವಾ ಪಾಕಿಸ್ತಾನವು ಪರಮಾಣು ಪರೀಕ್ಷೆಗಳಿಗೆ ಮುಂದಾದರೆ ಪರೀಕ್ಷಿಸಲು ನವದೆಹಲಿ ತನ್ನ ಹಕ್ಕುಗಳಲ್ಲಿದೆಯೇ ಎಂದು ಕೇಳಿದಾಗ ನಮ ನಿಲುವು ಮತ್ತು ನಿಲುವು ಅಂತರಾಷ್ಟ್ರೀಯ ಸಮುದಾಯವೆಂದರೆ ನಾವು ಪರಮಾಣು ಪರೀಕ್ಷೆಯ ಮೇಲಿನ ಸಾಮಾನ್ಯ ನಿಷೇಧಕ್ಕೆ ಹೋಗಬೇಕು ಆದ್ದರಿಂದ ಉಪಖಂಡದಲ್ಲಿ ಯಾವುದೇ ಹೆಚ್ಚಿನ ಪರೀಕ್ಷೆಯ ಅಗತ್ಯವಿಲ್ಲ ಎಂದು ನಾವು ಭಾವಿಸುತ್ತೇವೆ ಎಂದಿದ್ದಾರೆ. ಭಾರತವು ಪ್ರಸ್ತುತ 48 ದೇಶಗಳನ್ನು ತನ್ನ ಸದಸ್ಯರನ್ನಾಗಿ ಹೊಂದಿರುವ ಪರಮಾಣು ಪೂರೈಕೆದಾರರ ಗುಂಪಿನ ಭಾಗವಾಗಬೇಕೇ ಎಂಬ ಪ್ರಶ್ನೆಗೆ ಅವರು, ನಾನು ಪರಮಾಣು ಪೂರೈಕೆದಾರರ ಗುಂಪಿನ ಅಧ್ಯಕ್ಷನಾಗ್ದೆ ಮತ್ತು ತರುವ ಪ್ರಯತ್ನದಲ್ಲಿ ನಾನು ತುಂಬಾ ಸಕ್ರಿಯವಾಗಿ ಸಂವಹನ ನಡೆಸಿದ್ದೇನೆ.ಇದೇ ರೀತಿಯ ಆಕಾಂಕ್ಷೆಗಳನ್ನು ಹೊಂದಿರುವ ಇತರ ದೇಶಗಳನ್ನು ಒಳಗೊಂಡಂತೆ ಇದು ಸಮಾನ ಪರಿಹಾರಕ್ಕಾಗಿ. ವಿದೇಶಾಂಗ ಸಚಿವ ಎಸ್ ಜೈಶಂಕರ್ ಅವರೊಂದಿಗಿನ ನನ್ನ ಸಂವಾದಗಳು ಅತ್ಯಂತ ಉಪಯುಕ್ತವಾಗಿವೆ ಎಂದಿದ್ದಾರೆ.

ಬೆಂಕಿ ವದಂತಿಗೆ ಹೆದರಿ ಪುಷ್ಪಕ್ ರೈಲಿನಿಂದ ಜಿಗಿದ ಪ್ರಯಾಣಿಕರ ಮೇಲೆ ಹರಿದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು

ಮಹಾರಾಷ್ಟ್ರ: ಮುಂಬಯಿಗೆ ತೆರಳುತ್ತಿದ್ದ ಪುಷ್ಪಕ್ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಭಯಭೀತರಾದ ಪ್ರಯಾಣಿಕರು ಜೀವ ಭಯದಿಂದ ಚಲಿಸುವ ರೈಲಿನಿಂದ ಜಿಗಿಯಲು ಪ್ರಾರಂಭಿಸಿದ್ದಾರೆ. ಅದೇ ಸಮಯದಲ್ಲಿ ಪಕ್ಕದ ಹಳಿಯಲ್ಲಿ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ 10ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಹಲವರು ಗಾಯಗೊಂಡಿದ್ದಾರೆ. ಜಲಗಾಂವ್ ಜಿಲ್ಲೆಯ ಪಚೋರಾ ತಾಲ್ಲೂಕಿನ ಜಲಗಾಂವ್ - ಮುಂಬಯಿ ರೈಲು ಮಾರ್ಗದಲ್ಲಿ ಮಹಿಜಿ ಮತ್ತು ಪರ್ಧಾಡೆ ನಿಲ್ದಾಣಗಳ ನಡುವೆ ಈ ಭೀಕರ ಘಟನೆ ಸಂಭವಿಸಿದೆ. ಪುಷ್ಪಕ್ ಎಕ್ಸ್‌ಪ್ರೆಸ್ ರೈಲಿನಿಂದ ಇದ್ದಕ್ಕಿದ್ದಂತೆ ಹೊಗೆ ಬರಲಾರಂಭಿಸಿತು. ರೈಲಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂಬ ಭೀತಿಯಲ್ಲಿ ಕೆಲ ಪ್ರಯಾಣಿಕರು ರೈಲ್ವೇ ಹಳಿ ಮೇಲೆ ಹಾರಿದ್ದಾರೆ. ಅದೇ ಸಮಯದಲ್ಲಿ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಡಿಕ್ಕಿಯಾಗಿದೆ. ಹಲವು ಮೃತದೇಹದಲ್ಲಿ ಹಳಿ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ರೈಲಿನಿಂದ ಜಿಗಿದ ಕನಿಷ್ಠ 30-40 ಮಂದಿ ಗಾಯಗೊಂಡಿದ್ದಾರೆ.

ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಡಿಕ್ಕಿ

ಮುಂಬಯಿಗೆ ತೆರಳುತ್ತಿದ್ದ ಪುಷ್ಪಕ್ ಎಕ್ಸ್‌ಪ್ರೆಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಭಯಭೀತರಾದ ಪ್ರಯಾಣಿಕರು ಜೀವ ಭಯದಿಂದ ಚಲಿಸುವ ರೈಲಿನಿಂದ ಜಿಗಿಯಲು ಪ್ರಾರಂಭಿಸಿದ್ದಾರೆ. ಅದೇ ಸಮಯದಲ್ಲಿ ಪಕ್ಕದ ಹಳಿಯಲ್ಲಿ ಬರುತ್ತಿದ್ದ ಕರ್ನಾಟಕ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ 10ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಹಲವರು ಗಾಯಗೊಂಡಿದ್ದಾರೆ.

ವೈದ್ಯಕೀಯ ಚಿಕಿತ್ಸೆಗೆ ಸಿಎಂ ಯೋಗಿ ಆದೇಶ: ಪುಷ್ಪಕ್ ರೈಲು ದುರಂತದಲ್ಲಿ ಮೃತಪಟ್ಟ ಪ್ರಯಾಣಿಕರಿಗೆ ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಸಂತಾಪ ಸೂಚಿಸಿದ್ದಾರೆ. ಘಟನೆಯಲ್ಲಿ ಗಾಯಗೊಂಡವರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡುವಂತೆ ಆದೇಶಿಸಿದ್ದಾರೆ.

ಏಕಾಏಕಿ ಬ್ರೇಕ್ ಹಾಕಿದಾಗ ಹೊಗೆ ಬಂತು: ಜಲಗಾಂವ್‌ನ ಪರಂದಾ ರೈಲು ನಿಲ್ದಾಣ ವ್ಯಾಪ್ತಿಯಲ್ಲಿ ಹಳಿಗಳ ಕಾಮಗಾರಿ ನಡೆಯುತ್ತಿರುವುದರಿಂದ ರೈಲಿಗೆ ಎಚ್ಚರಿಕೆಯ ಸಂದೇಶ ರವಾನಿಸಲಾಗಿದೆ.

ಹೀಗಾಗಿ ಪುಷ್ಪಕ್ ಎಕ್ಸ್‌ಪ್ರೆಸ್ ರೈಲು ನಿಧಾನಗೊಳಿಸಲು ಬ್ರೇಕ್ ಹಾಕುತ್ತಿದ್ದಂತೆ, ಚಕ್ರಗಳಿಂದ ಕಿಡಿಗಳು ಹೊರಹೊಮ್ಮಿವೆ. ಇದನ್ನು ಕಂಡ ಪ್ರಯಾಣಿಕರು ಭಯಭೀತರಾಗಿದ್ದಾರೆ. ಕೂಡಲೇ ರೈಲಿಗೆ ಬೆಂಕಿ ಹೊತ್ತಿಕೊಂಡಿದೆ ಎಂದು ವದಂತಿ ಹಬ್ಬಿದೆ ಎಂದು ವರದಿಯಾಗಿದೆ. ಈ ಘಟನೆಯಿಂದ ಇತರೆ ರೈಲುಗಳ ಸಂಚಾರಕ್ಕೂ ತೊಂದರೆಯಾಗಿದೆ.

ಜಲಗಾಂವ್ ಜಿಲ್ಲಾಧಿಕಾರಿ ಹೇಳಿದ್ದೇನು?: ಕರ್ನಾಟಕ ಎಕ್ಸ್‌ಪ್ರೆಸ್ ರೈಲಿನಡಿ ಸಿಲುಕಿ 7 ರಿಂದ 8 ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ರೈಲ್ವೆ ನಿಯಂತ್ರಣ ಕೊಠಡಿ ತಿಳಿಸಿದೆ. ಕೂಡಲೇ ಜಿಲ್ಲಾಡಳಿತ ಘಟನಾ ಸ್ಥಳಕ್ಕೆ ಆಂಬ್ಯುಲೆನ್ಸ್ ಕಳುಹಿಸಿದೆ. ಸ್ಥಳೀಯ ಗ್ರಾಮೀಣ ಆಸ್ಪತ್ರೆ, ಖಾಸಗಿ ಆಸ್ಪತ್ರೆ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜನಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಅಪಘಾತದ ನಂತರ ರೈಲ್ವೇ ಇಲಾಖೆಯ ಹಿರಿಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದ್ದಾರೆ ಎಂದು ಜಲಗಾಂವ್ ಜಿಲ್ಲಾಧಿಕಾರಿ ಆಯುಷ್ ಪ್ರಸಾದ್ ಅಪಘಾತದ ಬಗ್ಗೆ ಮಾಹಿತಿ ನೀಡಿದ್ದಾರೆ.

ಕಸಿದುಕೊಳ್ಳಲು ಪನಾಮಾ ಕಾಲುವೆ ಅಮ

ವ್ಹೀಲ್ ಚೇರ್‌ನಲ್ಲಿ ರಶ್ಮಿಕಾ ಮಂದಣ್ಣ

ಮುಂದಿನ ಕೆಲ ವಾರ ಅಥವಾ ತಿಂಗಳ ಕಾಲ ನಾನು ವಿಶ್ರಾಂತಿಯಲ್ಲಿರುತ್ತೇನೆ. ಚೇತರಿಕೆಯಾಗಲು ಎಷ್ಟು ಸಮಯ ಬೇಕಾಗಬಹುದು ಎನ್ನುವುದು ದೇವರಿಗೆ ಮಾತ್ರ ತಿಳಿದಿದೆ.

ನಟಿ ರಶ್ಮಿಕಾ ಮಂದಣ್ಣ ಇತ್ತೀಚೆಗೆ ಜಿಮ್‌ನಲ್ಲಿ ಕಾಲಿಗೆ ಪೆಟ್ಟಾದ ಹಿನ್ನೆಲೆ ನಡೆಯಲು ಕಷ್ಟಪಡುತ್ತಿರುವ ಸ್ಥಿತಿಯಲ್ಲಿ ವಿಮಾನ ನಿಲ್ದಾಣದಲ್ಲಿ ಕಾಣಿಸಿಕೊಂಡಿದ್ದಾರೆ. ಕುಂಟುತ್ತಾ ವ್ಹೀಲ್ ಚೇರ್‌ನಲ್ಲಿ ನಟಿ ಕುಳಿತಿರುವ ವಿಡಿಯೋ ಸೋಶಿ ಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ.

ವಿಮಾನ ನಿಲ್ದಾಣದಲ್ಲಿ ರಶ್ಮಿಕಾ ಕಾಣಿಸಿಕೊಂಡಿದ್ದು, ಕುಂಟುತ್ತಾ ಕಾರಿನಿಂದ ಇಳಿದು ವ್ಹೀಲ್ ಚೇರ್‌ನಲ್ಲಿ ಕೂರಲು ಹರಸಾಹಸ ಮಾಡುತ್ತಿರುವ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ. ಕಾಲು ನೋವಿನ ನಡುವೆಯೂ ಒಪ್ಪಿಕೊಂಡಿರುವ ಸಿನಿಮಾ ಕೆಲಸ ಮಾಡಲು ಹೈದರಾಬಾದ್‌ನಿಂದ ಮುಂಬೈಗೆ ಅವರು ತೆರಳಿದ್ದಾರೆ. 'ಛಾವಾ' ಸಿನಿಮಾಗೆ ಡಬ್ಬಿಂಗ್ ಮಾಡೋದ್ರಲ್ಲಿ ಅವರು ಬ್ಯುಸಿಯಾಗಿದ್ದಾರೆ. ಅದೇನೇ ಇರಲಿ ಶ್ರೀವಲ್ಲಿ ಬೇಗ ಗುಣಮುಖರಾಗಲಿ ಎಂದು ಫ್ಯಾನ್ಸ್ ಪ್ರಾರ್ಥಿಸುತ್ತಿದ್ದಾರೆ.

ತಿಂಗಳ ಕಾಲ ನಾನು ವಿಶ್ರಾಂತಿ

ಇತ್ತೀಚೆಗೆ ಜಿಮ್‌ನಲ್ಲಿ ಕಾಲಿಗೆ ಪೆಟ್ಟಾಗಿರುವ ಬಗ್ಗೆ ನಟಿ ಸೋಶಿಯಲ್ ಮೀಡಿಯಾದಲ್ಲಿ ತಿಳಿಸಿದ್ದರು. ಜಿಮ್‌ನಲ್ಲಿ ನಾನು ಗಾಯಗೊಂಡಿದ್ದೇನೆ. ಮುಂದಿನ ಕೆಲ ವಾರ ಅಥವಾ ತಿಂಗಳ ಕಾಲ ನಾನು ವಿಶ್ರಾಂತಿಯಲ್ಲಿರುತ್ತೇನೆ. ಚೇತರಿಕೆಯಾಗಲು ಎಷ್ಟು ಸಮಯ ಬೇಕಾಗ ಬಹುದು ಎನ್ನುವುದು ದೇವರಿಗೆ ಮಾತ್ರ ತಿಳಿದಿದೆ. ನನ್ನ ಕಾಲಿನ ನೋವು ಗುಣವಾದ ಬಳಿಕ ನಾನು ಥಾಮ, ಸಿಕಂದರ್ ಮತ್ತು ಕುಬೇರ ಸೆಟ್‌ಗೆ ಮರಳುತ್ತೇನೆ. ಈ ವಿಳಂಬಕ್ಕೆ ಕ್ಷಮೆ ಕೋರುತ್ತೇನೆ ಎಂದಿದ್ದರು.

ಮದುವೆ ಬೇಡ, ನನಗೆ ನನ್ನ ಹಾಸಿಗೆಯಲ್ಲಿ ಒಬ್ಬ ವ್ಯಕ್ತಿ ಬೇಕು

ತಬು ಬಾಲಿವುಡ್ ಇಂಡಸ್ಟ್ರಿಯ ಅತ್ಯಂತ ಪ್ರತಿಭಾವಂತ ನಟಿಯರಲ್ಲಿ ಒಬ್ಬರು. ತೊಂಬತ್ತರ ದಶಕದಲ್ಲಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ ತಬು ಅನೇಕ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ತಮ್ಮ ಸಿನಿಮಾಗಳ ಹೊರತಾಗಿ, ತಬು ತಮ್ಮ ವೈಯಕ್ತಿಕ ಜೀವನದ ಬಗ್ಗೆ ಆಗಾಗ್ಗೆ ಸುದ್ದಿಯಲ್ಲಿರುತ್ತಾರೆ. 53 ವರ್ಷದ ತಬು ಇನ್ನೂ ಒಂಟಿ. ಅನೇಕ ಸಂದರ್ಶನಗಳಲ್ಲಿ, ಅವರ ಮದುವೆ ಮತ್ತು ಸಂಗಾತಿಯ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗಿದೆ. ಅಂತಹ ಸಂದರ್ಶನವೊಂದರಲ್ಲಿ ತಬು ಈ ಪ್ರಶ್ನೆಗೆ ನೀಡಿದ ಉತ್ತರವು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ. 'ಮದುವೆ ಬೇಡ, ನನಗೆ ನನ್ನ ಹಾಸಿಗೆಯಲ್ಲಿ ಒಬ್ಬ ವ್ಯಕ್ತಿ ಬೇಕು' ಎಂದು ತಬು ಸಂದರ್ಶನದಲ್ಲಿ ಹೇಳಿದ್ದರು ಎನ್ನಲಾಗಿದೆ. ಇದೀಗ ಈ ಸುದ್ದಿಗೆ ತಬು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಬು ತಂಡದಿಂದ ಹೇಳಿಕೆ ಬಿಡುಗಡೆಯಾಗಿದೆ. ಇದರಲ್ಲಿ ತಬು ಯಾವತ್ತೂ ಅಂತಹ ಹೇಳಿಕೆ ನೀಡಿಲ್ಲ ಎಂದು ಆಕೆಯ ತಂಡ ಸ್ಪಷ್ಟಪಡಿಸಿದೆ. ಸುದ್ದಿಯಲ್ಲಿ ಮುದ್ರಿಸಿರುವ ಅವರ ಹೇಳಿಕೆ ಸುಳ್ಳು ಎಂದಿದ್ದಾರೆ.

ತಬು ಹೇಳಿದ್ದು ನಿಜವೇ

'ಸಂದರ್ಶನಗಳಲ್ಲಿ ಅಥವಾ ಕಾರ್ಯಕ್ರಮಗಳಲ್ಲಿ ನಾನು ಅಂತಹ ಕಾಮೆಂಟ್‌ಗಳನ್ನು ಎಂದಿಗೂ ಮಾಡಿಲ್ಲ' ಎಂದು ತಬು ತಮ್ಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಇದನ್ನು ಪ್ರಿಂಟ್ ಮಾಡುವುದನ್ನು ನಿಲ್ಲಿಸಿ ಎಂದು ತಬು ತಂಡ ಹೇಳಿದೆ. 'ಹಲವಾರು ವೆಬ್ ಸೈಟ್‌ಗಳು ಮತ್ತು ಸಾಮಾಜಿಕ ಮಾಧ್ಯಮ ಹ್ಯಾಂಡಲ್‌ಗಳು ತಬು ಅವರ ಹೆಸರಿನಲ್ಲಿ ಕೆಲವು ಅವಮಾನಕರ ಮತ್ತು ಸುಳ್ಳು ಹೇಳಿಕೆಗಳನ್ನು ನೀಡುತ್ತಿವೆ. ಅವರು ಎಂದಿಗೂ ಅಂತಹ ಹೇಳಿಕೆಯನ್ನು ನೀಡಿಲ್ಲ ಎಂದು ನಾವು ಸ್ಪಷ್ಟಪಡಿಸಲು ಬಯಸುತ್ತೇವೆ.

ಹೈದರಾಬಾದ್‌ಗೆ ಯಾವಾಗ ಬಂದ್ರು ಪ್ರಿಯಾಂಕಾ

ಬಾಲಿವುಡ್ ನಟಿ, ದೇಸಿ ಗರ್ಲ್ ಪ್ರಿಯಾಂಕಾ ಚೋಪ್ರಾ ಹೈದರಾಬಾದ್‌ನ ಪ್ರಸಿದ್ಧ ದೇವಸ್ಥಾನಕ್ಕೆ ಭೇಟಿ ಕೊಟ್ಟಿದ್ದಾರೆ. ಹಾಲಿವುಡ್‌ನಲ್ಲಿ ಮಿಂಚುತ್ತಿರುವ ಈ ಚೆಲುವೆ ಮಹೇಶ್ ಬಾಬು ನಟಿಸುತ್ತಿರುವ ಎಸ್‌ಎಸ್ ರಾಜಮೌಳಿ ಅವರ ಮುಂಬರುವ ಸಿನಿಮಾದ ಅನೌನ್ಸ್‌ಮೆಂಟ್‌ನಲ್ಲಿ ಭಾಗಿಯಾಗಲು ಬಂದಿದ್ದಾರೆ ಎನ್ನಲಾಗಿದೆ.ನಟಿಯ ಭೇಟಿಯ ಫೊಟೋಸ್ ಕೂಡಾ ವೈರಲ್ ಆಗಿದೆ. ನಟಿ ದೇವಸ್ಥಾನಕ್ಕೆ ಭೇಟಿ ಕೊಟ್ಟ ನಂತರ ಫೊಟೋಗಳನ್ನು ಶೇರ್ ಮಾಡಿದ್ದಾರೆ. ಅಭಿಮಾನಿಗಳು ನಟಿ ಇವೆಂಟ್‌ನಲ್ಲಿ ಭಾಗಿಯಾಗಬಹುದು ಎಂದು ಭಾರೀ ಕುತೂಹಲದಿಂದ ನಿರೀಕ್ಷೆ ಕುತೂಹಲದಿಂದ ಪ್ರತಿಷ್ಠಿತ ಯೋಜನೆಯಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ನಿರೀಕ್ಷಿಸುತ್ತಿದ್ದಾರೆ.

ಹೈದರಾಬಾದ್‌ಗೆ ಭೇಟಿ ನೀಡುವ ಮೊದಲು, ಪ್ರಿಯಾಂಕಾ ಅವರು ನಗರದ ಚಿಲ್ಕೂರ್ ಬಾಲಾಜಿ ದೇವಸ್ಥಾನಕ್ಕೆ ಭೇಟಿ ನೀಡಿದ ಚಿತ್ರಗಳನ್ನು ಹಂಚಿಕೊಂಡಿದ್ದಾರೆ. ಅವರ ಫೊಟೋದಲ್ಲಿ ಅವರು ತುಂಬಾ ಸಿಂಪಲ್ ಆಗಿ ಸಲ್ವಾರ್ ಧರಿಸಿ ದೇವರ ದರ್ಶನ ಮಾಡುವುದು ಕಂಡು ಬಂದಿದೆ. ತಿಳಿ ನೀಲಿ ಸಲ್ವಾರ್ ಸೂಟ್ ಧರಿಸಿ ಮತ್ತು ದುಪಟ್ಟಾವನ್ನು ತಲೆಯನ್ನು ಮುಚ್ಚುವಂತೆ ಕವರ್ ಮಾಡಿಕೊಂಡಿದ್ದರು ನಟಿ. ಬಾಲಾಜಿ ದೇವಸ್ಥಾನದಲ್ಲಿ ಪ್ರಿಯಾಂಕಾ ತನ್ನ ಪ್ರಾರ್ಥನೆಯನ್ನು ಸಲ್ಲಿಸಿದರು. ದೇವಾಲಯದ ಆಧ್ಯಾತ್ಮಿಕ ವಾತಾವರಣಕ್ಕೆ ಹೊಂದುವಂತೆಯೇ ಅವರು ರೆಡಿಯಾಗಿದ್ದರು. ಫೋಟೋಗಳಲ್ಲಿ ಅವರು ಪುರೋಹಿತರ ಜೊತೆ ಮಾತನಾಡುತ್ತಿರುವುದು ಮತ್ತು ತನ್ನ ತಂಡದೊಂದಿಗೆ ದೇವಾಲಯದ ಒಳಗೆ ನಡೆಯುತ್ತಿರುವುದನ್ನು ಕಾಣಬಹುದು.

ಮದುವೆಯಾಗಿ 2 ವರ್ಷಕ್ಕೆ ಡಿವೋರ್ಸ್

ಮಲಯಾಳಂ ಮತ್ತು ತಮಿಳು ಸಿನಿಮಾಗಳಲ್ಲಿ ಗುರುತಿಸಿಕೊಂಡಿರುವ ಅಪರ್ಣಾ ವಿನೋದ್ ಅವರು ಮದುವೆಯಾಗಿ ಎರಡೇ ವರ್ಷಕ್ಕೆ ದಾಂಪತ್ಯ ಜೀವನಕ್ಕೆ ಅಂತ್ಯ ಹಾಡಿದ್ದಾರೆ. ಪತಿಯಿಂದ ದೂರವಾಗಿರೋದಾಗಿ ಘೋಷಿಸಿದ್ದಾರೆ. ಡಿವೋರ್ಸ್ ನೀಡಿರೋದಾಗಿ ನಟಿ ತಿಳಿಸಿದ್ದಾರೆ. ಇನ್ಸ್ಟಾಗ್ರಾಂ ಸ್ಟೋರಿಯಲ್ಲಿ ನನ್ನ ಜೀವನದಲ್ಲಿ ಮಹತ್ವದ ಬದಲಾವಣೆ ಆಗಿದೆ. ಸಾಕಷ್ಟು ಯೋಚಿಸಿಕೊಂಡು ನಾನು ನನ್ನ ಪತಿಯಿಂದ ದೂರವಾಗುವ ನಿರ್ಧಾರಕ್ಕೆ ಬಂದಿದ್ದೇನೆ. ಇದು ಸುಲಭವಾದ ಆಯ್ಕೆಯಾಗಿರಲಿಲ್ಲ. ಆದರೆ ಇದು ನನಗೆ ಸರಿಯಾದ ಆಯ್ಕೆಯಾಗಿತ್ತು. ನನ್ನ ವೈಯಕ್ತಿಕ ಬೆಳವಣಿಗೆಗೆ ಅಗತ್ಯವಾಗಿತ್ತು. ನನ್ನ ಮದುವೆಯು ಭಾವನಾತ್ಮಕವಾಗಿ ಕಷ್ಟಕರ ಹಂತವಾಗಿತ್ತು. ಜೀವನದಲ್ಲಿ ಈ ಅಧ್ಯಾಯವನ್ನು ಮುಚ್ಚಿ ಮುಂದೆ ಹೋಗಲು ನಿರ್ಧರಿಸಿದ್ದೇನೆ. ಈ ಸಮಯದಲ್ಲಿ ನಾನು ಪಡೆದ ಪ್ರೀತಿ ಮತ್ತು ಬೆಂಬಲಕ್ಕಾಗಿ ಕೃತಜ್ಞಳಾಗಿದ್ದೇನೆ. ಮುಂದೆ ಒಳ್ಳೆಯದಾಗುತ್ತದೆ ಎನ್ನುವ ವಿಶ್ವಾಸ ಹಾಗೂ ನಂಬಿಕೆ ಇದೆ ಎಂದು ಅವರು ಬರೆದುಕೊಂಡಿದ್ದಾರೆ.

ಇನ್ನೂ ರಿನಿಲ್ ರಾಜ್ ಅವರನ್ನು 2022ರಲ್ಲಿ ನಟಿ ಮದುವೆಯಾದರು.

ಕೆಲ ಮನಸ್ತಾಪಗಳಿಂದ ವೈವಾಹಿಕ ಜೀವನಕ್ಕೆ ಅಪರ್ಣಾ ಅಂತ್ಯ ಹಾಡಿದ್ದಾರೆ. 2015ರಲ್ಲಿ ತೆರೆಕಂಡ 'ನನ್ನ ನಿನ್ನೊಡು ಕೂಡೆಯುಂಡು' ಮೂಲಕ ನಟಿ ಬಣ್ಣದ ಲೋಕಕ್ಕೆ ಎಂಟ್ರಿ ಕೊಟ್ಟರು. ಆ ನಂತರ ದಳಪತಿ ವಿಜಯ್ ಮತ್ತು ಕೀರ್ತಿ ಸುರೇಶ್ ಜೊತೆ ಭೈರವ ಸಿನಿಮಾದಲ್ಲಿ ಅಪರ್ಣಾ ನಟಿಸಿದ್ದರು.

ಶಿವರಾಜ್‌ಕುಮಾರ್ ಸಿನಿಮಾದಲ್ಲಿ ಕುಂಭಮೇಳ ಸುಂದರಿ

ಸುಂದರಿ ಸಾಧ್ವಿ ಹರ್ಷ ಅವರ ಬಳಿಕ ಮಹಾಕುಂಭ ಮೇಳದಲ್ಲಿ ಸಖತ್ ಸೌಂಡ್ ಮಾಡಿದ್ದು ಈ ಮೋನಾಲಿಸಾ. ಸಾಮಾಜಿಕ ಜಾಲತಾಣಗಳಲ್ಲಿ ಅವಳದ್ದೇ ಚರ್ಚೆ. ಆಕೆಯ ಸೌಂದರ್ಯ ಹಾಗೂ ಕಣ್ಣೋಟಕ್ಕೆ ಎಲ್ಲಾರೂ ಮಾರು ಹೋಗಿದ್ದರು. ಮಧ್ಯಪ್ರದೇಶದ ಮೊನಾಲಿಸಾ ಭೋಸ್ಲೆ ಸೌಂದರ್ಯವೇ ಹೀಗೆ. ಮಹಾ ಕುಂಭಮೇಳದಲ್ಲಿ ರುದ್ರಾಕ್ಷಿ ಮತ್ತು ಮುತ್ತಿನ ಹಾರಗಳನ್ನು ಮಾರುವ ಮೂಲಕ ಸಾಮಾಜಿಕ ಜಾಲತಾಣಗಳನ್ನು ಸೆಳೆದ ಮೊನಾಲಿಸಾ ಭೋಸ್ಲೆ ಇದ್ದಕ್ಕಿದ್ದಂತೆ ದೇಶದಾದ್ಯಂತ ಚರ್ಚೆಯಾದರು. ಕುಂಭಮೇಳದಿಂದಾಗಿ ಈ ಯುವತಿಗೆ ಈಗ ಸಿನಿಮಾದ ಅವಕಾಶ ಸಿಕ್ಕಿದೆ. ರಾಮ್‌ಚರಣ್ ಸಿನಿಮಾಗೆ ಆಫರ್ ಬಂದಿದೆ ಎನ್ನಲಾಗಿದೆ. ಡಾ. ಶಿವರಾಜ್ಕುಮಾರ್ ಅವರ ಮುಂಬರುವ ಸಿನಿಮಾದಲ್ಲಿ ಈ ನೈಜ ಸುಂದರಿ ಮುಖ್ಯಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾಳೆ ಎನ್ನಲಾಗಿದೆ. ಅದುವೇ ರಾಮ್‌ಚರಣ್ ಸಿನಿಮಾ. ರಾಮ್ ಚರಣ್ ಎದುರು ಮೊನಾಲಿಸಾ ಬೋಂಸ್ಲೆ ನಟಿಸುತ್ತಿದ್ದಾರೆ ಎಂದು ವರದಿಯಾಗಿದೆ. ಬುಚ್ಚಿ ಬಾಬು ನಿರ್ದೇಶನದಲ್ಲಿ ಆರ್‌ಸಿ 16 ಚಿತ್ರದಲ್ಲಿ ಚೆರಿ ನಾಯಕ ಮತ್ತು ಜಾನ್ವಿ ಕಪೂರ್ ನಾಯಕಿ. ಜಾನ್ವಿ ಕಪೂರ್ ಈಗಾಗಲೇ ನಾಯಕಿಯಾಗಿ ಫಿಕ್ಸ್ ಆಗಿದ್ದಾರೆ. ಇದರೊಂದಿಗೆ ಮೋನಾಲಿಸಾಗೆ ಯಾವ ರೀತಿಯ ಪಾತ್ರವನ್ನು ನೀಡಲಾಗುವುದು ದೇಶಾದ್ಯಂತ ಮೋನಾಲಿಸಾ ಸೌಂದರ್ಯಕ್ಕೆ ಯೂತ್ ಫುಲ್ ಮುಗಿಬೀಳುತ್ತಿದ್ದು, ಆರ್ ಸಿ 16 ಚಿತ್ರದಲ್ಲಿ ಯುವತಿಗೆ ಒಳ್ಳೆಯ ಪಾತ್ರ ಸಿಕ್ಕರೆ ಪ್ಯಾನ್ ಇಂಡಿಯಾ ಸಿನಿಮಾದ ಜೊತೆಗೆ ಚರಣ್ ಗೆ ಹೊಂದಾಣಿಕೆಯಾಗಲಿದೆ ಎನ್ನುತ್ತಿದ್ದಾರೆ ಅಭಿಮಾನಿಗಳು.



ಯೋಧನ ಸೆಲ್ಫಿ ಮನವಿಗೆ ಕೊಹ್ಲಿ ನಕಾರ

ವಿರಾಟ್ ಕೊಹ್ಲಿ ಸೈನಿಕನೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ನಿರಾಕರಿಸಿದ ವಿಡಿಯೋ ಇದೀಗ ಸೋಶಿಯಲ್ ಮೀಡಿಯಾದಲ್ಲಿ ಸಾಕಷ್ಟು ವೈರಲ್ ಆಗಿದೆ. ಇದು ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಕೊಹ್ಲಿಯ ವರ್ತನೆಗೆ ಅನೇಕರು ಟೀಕಿಸಿದ್ದು, ರೋಹಿತ್ ಶರ್ಮಾರನ್ನು ನೋಡಿ ಕಲಿಯಿರಿ ಎಂದು ಹಲವರು ಕೊಹ್ಲಿಗೆ ವಿನಮ್ರತೆಯ ಪಾಠ ಮಾಡಿದ್ದಾರೆ. ವಿರಾಟ್ ಕೊಹ್ಲಿ.. ಆಧುನಿಕ ಕ್ರಿಕೆಟ್ ಲೋಕದ ಅನಭಿಷಿಕ್ತ ದೊರೆ ಎಂದು ಹೇಳಿದರೆ ತಪ್ಪಾಗಲಾರದು. ಈ ಕ್ರಿಕೆಟ್ ಸಾಮ್ರಾಟನಿಗೆ ಭಾರತದಲ್ಲಿ ಮಾತ್ರವಲ್ಲದೆ ಇಡೀ ವಿಶ್ವದಲ್ಲೇ ಅಸಂಖ್ಯಾತ ಅಭಿಮಾನಿಗಳಿದ್ದಾರೆ. ಕೊಹ್ಲಿ ಕೂಡ ತನ್ನ ಅಭಿಮಾನಿ ಬಳಗದೊಂದಿಗೆ ನಯವಾಗಿ ನಡೆದುಕೊಳ್ಳುವ ಮೂಲಕ ಎಲ್ಲಾರ ಆರಾಧ್ಯ ದೈವ ಎನಿಸಿಕೊಂಡಿದ್ದಾರೆ. ಆದಾಗ್ಯೂ ಇದೀಗ ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿರುವ ಅದೊಂದು ವಿಡಿಯೋ ಕೊಹ್ಲಿ ಮೇಲೆ ಸಹಸ್ರಾರು ಅಭಿಮಾನಿಗಳು ಕೋಪಗೊಳ್ಳುವಂತೆ ಮಾಡಿದೆ. ದೇಶ ಕಾಯುವ ಸೈನಿಕನ ಸೆಲ್ಫಿ ಮನವಿಗೆ ವಿರಾಟ್ ಕೊಹ್ಲಿ ಒಲ್ಲೆ ಎಂದಿರುವುದು ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ. ನಮ್ಮ ಮತ್ತು ದೇಶದ ಭದ್ರತೆಗಾಗಿ ಹಗಲಿರುಳು ಶ್ರಮಿಸುವ ಯೋಧನೊಂದಿಗೆ ವಿರಾಟ್ ಸೆಲ್ಫಿ ತೆಗೆದುಕೊಂಡಿದ್ದರೆ ಏನಾಗುತ್ತಿತ್ತು ಎಂದು ಹಲವರು ಕೊಹ್ಲಿಯನ್ನು ಪ್ರಶ್ನಿಸುತ್ತಿದ್ದಾರೆ.

ವೈರಲ್ ವಿಡಿಯೋದಲ್ಲಿ ಏನಿದೆ

ಮೊದಲನೆಯದಾಗಿ, ವಿರಾಟ್ ಕೊಹ್ಲಿಯ ವೈರಲ್ ವಿಡಿಯೋದಲ್ಲಿ ಏನಿದೆ ಎಂಬುದನ್ನು ನೋಡುವುದಾದರೆ.. ಈ ವೈರಲ್ ವಿಡಿಯೋ ಮುಂಬೈನದ್ದಾಗಿದ್ದು, ವಿರಾಟ್ ಕಾರಿನಿಂದ ಇಳಿದು ಸ್ವಲ್ಪ ದೂರ ನಡೆದ ನಂತರ ಒಂದೆಡೆ ನಿಲ್ಲುತ್ತಾರೆ. ಈ ವೇಳೆ ಅಲ್ಲಿಯೇ ನಿಂತಿದ್ದ ಸೈನಿಕನೊಬ್ಬ ತನ್ನ ಮೊಬೈಲ್ ಫೋನ್ ತೆಗೆದು ಸೆಲ್ಫಿಗಾಗಿ ಕೊಹ್ಲಿ ಬಳಿ ವಿನಂತಿಸುತ್ತಾನೆ. ಆದರೆ ವಿರಾಟ್ ತನ್ನ ಕೈಗಳಿಂದ ಸನ್ನೆ ಮಾಡುವ ಮೂಲಕ ಯೋಧನ ಸೆಲ್ಫಿ ಮನವಿಯನ್ನು ನಿರಾಕರಿಸುತ್ತಾರೆ. ರೋಹಿತ್ ನೋಡಿ ಕಲಿಯಿರಿ ಎಂದ ಫ್ಯಾನ್ಸ್ ಈ ವಿಡಿಯೋ ವೈರಲ್ ಆದ ದಿನವೇ, ರೋಹಿತ್ ಶರ್ಮಾ ಅವರ ಇನ್ನೊಂದು ಫೋಟೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದ್ದು, ಅದರಲ್ಲಿ ಅವರು ಸೇನಾ ಅಧಿಕಾರಿಯೊಂದಿಗೆ ಫೋಟೋಗೆ ಪೋಸ್ ನೀಡಿದ್ದಾರೆ.



132ಕ್ಕೆ ಇಂಗ್ಲೆಂಡ್ ಸರ್ವಪತನ

ಭಾರತದ ಬೌಲರ್‌ಗಳ ಮುಂದೆ ಮಂಡಿಯೂರಿದ ಬಾಝ್‌ಬಾಲ್ ಬಾಯ್ಸ್!

ಮೊದಲ ಟಿ20ಯಲ್ಲಿ ಭಾರತೀಯ ಬೌಲರ್‌ಗಳ ದಾಳಿಗೆ ಉತ್ತರಿಸಲಾಗದೇ ಪೆವಿಲಿಯನ್ ಪರೇಡ್ ನಡೆಸಿದ ಆಂಗ್ಲರು 20 ಓವರ್‌ಗಳಲ್ಲಿ ಕೇವಲ 132 ರನ್‌ಗಳಿಗೆ ಆಲೌಟ್ ಆಗಿ ನೀರಸ ಪ್ರದರ್ಶನ ತೋರಿದೆ.

ಕೋಲ್ಕತ್ತಾದ ಈಡೆನ್ ಗಾರ್ಡನ್ಸ್‌ನಲ್ಲಿ ನಡೆಯುತ್ತಿರುವ ಐದು ಪಂದ್ಯಗಳ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಪ್ರವಾಸಿ ಇಂಗ್ಲೆಂಡ್ ತಂಡ ನೀರಸ ಪ್ರದರ್ಶನ ತೋರಿದೆ. ಭಾರತೀಯ ಬೌಲರ್‌ಗಳ ದಾಳಿಗೆ ಉತ್ತರಿಸಲಾಗದೇ ಪೆವಿಲಿಯನ್ ಪರೇಡ್ ನಡೆಸಿದ ಆಂಗ್ಲರು 20 ಓವರ್‌ಗಳಲ್ಲಿ ಕೇವಲ 132 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿದೆ.

ಟಾಸ್ ಗೆದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಬೌಲಿಂಗ್ ಆಯ್ಕೆ ಮಾಡಿಕೊಂಡರು. ಬ್ಯಾಟಿಂಗ್ ಆರಂಭಿಸಿದ ಆಂಗ್ಲ ಪಡೆ ಖಾತೆ ತೆರೆಯುವ ಮುನ್ನವೇ ಮೊದಲ ವಿಕೆಟ್ ಕಳೆದುಕೊಂಡಿತು. ಮೊದಲ ಓವರ್‌ನಲ್ಲೇ ಫಿಲ್ ಸಾಲ್ಟ್ (0) ಕೀಪರ್ ಸಂಜು ಸ್ಯಾಮ್ಸನ್‌ಗೆ ಕ್ಯಾಚ್ ನೀಡಿ ಔಟ್ ಆದರು. ನಂತರ ಮತ್ತೆ 3ನೇ ಓವರ್‌ನಲ್ಲಿ ಮತ್ತೊಬ್ಬ ಆರಂಭಿಕ ಬೆನ್ ಡಕೆಟ್(4) ರನ್ನ ಕೂಡ ಅರ್ಷದೀಪ್ ಪೆವಿಲಿಯನ್‌ಗಟ್ಟಿದರು. ಒಂದು ಕಡೆ ವಿಕೆಟ್ ಬೀಳುತ್ತಿದ್ದರೂ ನಾಯಕ ಬಟ್ಲರ್ ಮಾತ್ರ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿದರು. ಅವರು 44 ಎಸೆತಗಳಲ್ಲಿ 8 ಬೌಂಡರಿ, 2 ಸಿಕ್ಸರ್ ಸಹಿತ 68 ರನ್‌ಗಳಿಸಿ ತಂಡದ ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಬಟ್ಲರ್, ಹ್ಯಾರಿ ಬ್ರೂಕ್ ಜೊತೆ ಸೇರಿ 3ನೇ ವಿಕೆಟ್‌ಗೆ 48 ರನ್‌ಗಳಿಸಿದರು. ಆದರೆ ಬ್ರೂಕ್ ಕೇವಲ 17 ರನ್‌ಗಳಿಸಿ ವರುಣ್ ಚಕ್ರವರ್ತಿ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ನಂತರ ಬಂದ ಆಲ್‌ರೌಂಡರ್ ಲಿಯಾಮ್ ಲಿವಿಂಗ್‌ಸ್ಟೋನ್ ಅದೇ ಓವರ್‌ನಲ್ಲಿ 2 ಎಸೆತಗಳ ಡಕ್ ಆದರು. ಆರ್ಚರ್ (12) ಹೊರತುಪಡಿಸಿ ನಂತರ ಬಂದ ಯಾವ ಬ್ಯಾಟರ್ ಕೂಡ ಎರಡಂಕಿ ಮೊತ್ತ ದಾಖಲಿಸಲಿಲ್ಲ. ಜಾಕೋಬ್ ಬೆಥೆಲ್ 7, ಜೇಮಿ ಓವರ್‌ಟನ್ 2, ಗಸ್ ಅಟ್ಕಿನ್ಸನ್ 2, ಆದಿಲ್ ರಶೀದ್ ಅಜೇಯ 8, ಮಾರ್ಕ್‌ವುಡ್ 1 ರನ್‌ಗಳಿಸಿದರು. ಒಟ್ಟಾರೆ ಇಂಗ್ಲೆಂಡ್ ತಂಡ 20 ಓವರ್‌ಗಳಲ್ಲಿ 132ಕ್ಕೆ ಆಲೌಟ್ ಆಯಿತು. ಗೋಲ್ಡನ್ ಫಾರ್ಮ್‌ನಲ್ಲಿರುವ ವರುಣ್ ಚಕ್ರವರ್ತಿ 4 ಓವರ್‌ನಲ್ಲಿ 23 ರನ್ ನೀಡಿ 3 ವಿಕೆಟ್ ಪಡೆದರೆ, ಅಕ್ಷರ್ ಪಟೇಲ್ 22ಕ್ಕೆ 2 ವಿಕೆಟ್ ಪಡೆದರು. ಅರ್ಷ ದೀಪ್ 17ಕ್ಕೆ2, ಹಾರ್ದಿಕ್ ಪಾಂಡ್ಯ 42ಕ್ಕೆ 2 ವಿಕೆಟ್ ಪಡೆದರು.

ಹೆಡ್ ಟು ಹೆಡ್ ರೆಕಾರ್ಡ್

**ಇಲ್ಲಿಯವರೆಗೆ ಟೀಮ್ ಇಂಡಿಯಾ ಹಾಗೂ ಇಂಗ್ಲೆಂಡ್ ತಂಡಗಳು 24 ಪಂದ್ಯಗಳಲ್ಲಿ ಮುಖಾಮುಖಿಯಾಗಿದ್ದು, ಭಾರತ 13ರಲ್ಲಿ ಗೆದ್ದರೆ, 11ರಲ್ಲಿ ಸೋಲು ಕಂಡಿದೆ. ಕಳೆದ 10 ವರ್ಷಗಳಿಂದ ಇಂಗ್ಲೆಂ